**ಉಚಿತ ಪ್ರತಿಗಳಿಗಾಗಿ ಮತ್ತು ಉಚಿತ ಪತ್ರಿಕೆಗಳಿಗಾಗಿ**
**ನಮ್ಮ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ**




**ಸತ್ಯವೇದದಲ್ಲಿನ ವಿಷಯಗಳ ಬಗ್ಗೆ ಹೆಚ್ಚಿನ ವಿವರ ಹಾಗೂ ಅಂಚೆ ಮೂಲಕ ಉಚಿತವಾಗಿ ಪಾಠಗಳನನ್ನು ಪಡೆಯಲಿಚ್ಛಿಸುವವರು ಈ ಕೆಳಗಿನ ವಿಳಸಾಕೆ ಪತ್ರ ಬರೆಯಬಹುದು**

ನಮ್ಮ ವಿಳಾಸ :
**The Christadelphians**
PO Box **4237**
Bangalore 560042

# ನೂತನ ಸೃಷ್ಟಿ

ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು

ಸಂಚಿಕೆ 20



* ದಾನಿಯೇಲನು ದೇವರಿಗೋಸ್ಕರ ನಿಂತದ್ದು
* ಐವತ್ತನೆಯ ಹುಟ್ಟುಹಬ್ಬವನ್ನಾಚರಿಸಿದ ಒಂದು ಪ್ರಾಚೀನ ದೇಶ

## ಕ್ರಿಸ್ಟಡೆಲ್ಫಿಯನ್ಸರು ಎಂದರೆ ಯಾರು?

ಕ್ರಿಸ್ಟಡೆಲ್ಫಿಯನ್ ಎಂಬ ಪದ ಮೂಲತಃ ಗ್ರೀಕ್ ಭಾಷೆಯ ಎರಡು ಪದಗಳಿಂದ ಬಂದಿದೆ, ಅವುಗಳೆಂದರೆ 'ಕ್ರೈಸ್ಟ್' ಮತ್ತು 'ಅಡೆಲ್ಫೊಸ್' ಅವುಗಳ ಸರಳ ಅರ್ಥವೆಂದರೆ **"ಕ್ರಿಸ್ತನ ಸಹೋದರರು"**ಎಂಬುದಾಗಿದೆ. ಕ್ರಿಸ್ಟಡೆಲ್ಫಿಯನ್ನರು ಪ್ರಪಂಚದಲ್ಲೆಲ್ಲ ಒಂದೇ ಸಮೂಹವಾಗಿದ್ದು, ಸತ್ಯವೇದವು ಒಬ್ಬನೇ ಸತ್ಯದೇವರಿಂದ ಬರೆಸಲ್ಪಟ್ಟಿದ್ದು ಅದನ್ನೇ ಅಧಾರವಾಗಿ ಜೀವನವನ್ನು ನೆಡೆಸುವವರಾಗಿದ್ದೇವೆ.

ನಾವು ಯೇಸು(ದೇವರ ಒಬ್ಬನೇ ಮಗ)ಭೂಲೋಕಕ್ಕೆ ಸರ್ವ ಅಧಿಕಾರವುಳ್ಳವನಾಗಿ ಹಿಂತಿರುಗಿ ಬರುತ್ತಾನೆ ಮತ್ತು ಭೂಲೋಕಕ್ಕೆ ನ್ಯಾಯ, ನೀತಿ ಮತ್ತು ಶಾಂತಿಯನ್ನು ಉಂಟುಮಾಡುತ್ತಾನೆ. ಇಲ್ಲಿನ ಎಲ್ಲಾರೀತಿಯ ಅಸಮಾನತೆ, ಅಶಾಂತಿ, ರಕ್ತಪಾತಗಳನ್ನು ಕೊನೆಗಾಣಿಸುತ್ತಾನೆ ಎಂದು ನಂಬುತ್ತೇವೆ.

ನಾವುಗಳು ಮರಣವನ್ನು ಹೊಂದಿದರೂ ಸಹ ಯೇಸುಕ್ರಿಸ್ತ ನಮ್ಮನ್ನು ಮರಣದಿಂದ ಎಬ್ಬಿಸಿ ನ್ಯಾಯತೀರ್ಪು ಕೊಡುತ್ತಾನೆ. ನಾವು ದೇವರ ವಾಕ್ಯಗಳಿಗೆ ಅವಿಧೇಯರಾಗಿ, ಕೆಟ್ಟವರಾಗಿ, ದೇಹದ ಆಶೆಗಳಿಗೆ ಅನುಗುಣವಾಗಿ ನಡೆದಿದ್ದರೆ ಮರಣವನ್ನು ಕೊಡುತ್ತಾನೆ, ಆದರೆ ನಾವು ದೇವರ ವಾಕ್ಯಗಳನ್ನು ನಂಬಿ ಅವುಗಳನ್ನೇ ಅನುಸರಿಸಿ ನಡೆದರೆ ನಿತ್ಯಜೀವ ಕೊಡುತ್ತಾನೆ ಎಂದು ನಂಬುತ್ತೇವೆ. ನಾವು ಒಬ್ಬ ಮಾನವನು ಜೀವವನ್ನು ಪಡೆಯಬೇಕಾದರೆ ಬಹಳ ಮುಖ್ಯವಾಗಿ ಎರಡು ಆಜ್ಞೆಗಳನ್ನು ಅನುಸರಿಸಲೇಬೇಕು ಎಂದು ನಂಬುತ್ತೇವೆ, ಅವುಗಳೆಂದರೆ: (1)ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದ ಪ್ರೀತಿಸಬೇಕು ಮತ್ತು ಆತನನ್ನೊಬ್ಬನನ್ನೆ ಆರಾಧಿಸಬೇಕು, ಮತ್ತು (2)ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬವುಗಳೇ.

**Co-ordinator : Linus Daniel**

**e-mail :**
**info@choose2live.info**
http://www.choose2live.info/noothana_shristi

**Contact:**
The Christadelphians,
P.O.Box No 535,
Bangalore 560 005,
India.

### ನೂತನ ಸೃಷ್ಟಿ ಪತ್ರಿಕೆಯ ತಂಡ

ಲೀನಸ್ ಡ್ಯಾನಿಯಲ್ : ಸಂಯೋಜಕರು.

ಸುಧೀರ್ ಬಿ.ಜಿ : ಪುನರವಲೋಕನ,
ಮತ್ತು
ಡಿ.ಟಿ.ಪಿ ಸಂಯೋಜಕರು.

ಕಿರಣ್
ರೀಟಾ ಸತ್ಯರಾಜ್ } ಭಾಷಾಂತರಕಾರರು

ನಿಮ್ಮನ್ನು ಈ ಪತ್ರಿಕೆಯ ಮೂಲಕ ದೇವರ ವಾಕ್ಯಗಳಲ್ಲಿ ಉತ್ತೇಜಿಸುವ ಒಂದು ಪ್ರಯತ್ನ ನಮ್ಮದಾಗಿದೆ, ನೀವು ಇದರ ಮೂಲಕ ಆತ್ಮೀಕವಾಗಿ ಪೋಷಣೆಹೊಂದಬಹುದಾಗಿದೆ ಮತ್ತು ನಿಮ್ಮನ್ನು ಉನ್ನತ ಸ್ಥಿತಿಗೆ ತರಲು ಸಹಕಾರಿಯಾಗಿದೆ. ಸತ್ಯವೇದವನ್ನು ಓದಲು ನಾವು ಉತ್ತೇಜಿಸುತ್ತೇವೆ, ಏಕಂದರೆ ಸತ್ಯವೇದವು ನಿಮ್ಮನ್ನು ವಿವೇಕಿಗಳಾಗಿ ಮಾಡುವುದರ ಜೊತೆಗೆ ನಿಮ್ಮ ರಕ್ಷಣೆಗೆ ಮಾರ್ಗಸೂಚಿಯಾಗಿದೆ.
ಈ ಪತ್ರಿಕೆಯಲ್ಲಿರುವ ಎಲ್ಲಾ ವಸ್ತುವಿಷಯಗಳನ್ನು ಕ್ರಿಸ್ಟಡೆಲ್ಫಿಯನ್ನರ ಆಂಗ್ಲ ಭಾಷೆಯ ವಿಷಯಗಳಿಂದ ಕನ್ನಡಕ್ಕೆ ಭಾಷಾಂತರಿಸಿದೆ.

*"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು; ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."[2ಕೊರಿಂಥ 5:17]*



# ದಾನಿಯೇಲನು ದೇವರಿಗೋಸ್ಕರ ನಿಂತದ್ದು

## ದಾನಿಯೇಲನಂತ ಧೈರ್ಯಮಾಡು!

ಪ್ರವಾದಿಯಾದ ದಾನಿಯೇಲನ ಹೆಸರನ್ನು ಮತ್ತು ಆತನ ವಿಷಯವನ್ನು ದಾನಿಯೇಲನ ಪ್ರವಾದನೆಯ ಪುಸ್ತಕದಲ್ಲಿ ನಾವು ಅರ್ಥಮಾಡಿಕೊಳ್ಳುವಾಗ ಅವನ ಪ್ರಾಮಾಣಿಕತೆಯನ್ನು ಮೇಲ್ನೋಟದಲ್ಲಿ ಮಾತ್ರ ನೋಡಿರುತ್ತೇವೆ, ಆದರೆ ಒಳಹೊಕ್ಕು ಅಧ್ಯಯನ ಮಾಡಿದಾಗ ದಾನಿಯೇಲ ಸತ್ಯದೇವರ ಮೇಲೆ ಸ್ಥಿರವಾಗಿ ನಂಬಿಕೆಯಿಟ್ಟು ತನ್ನ ಜೀವನವನ್ನು ದೇವರಿಗಾಗಿ ಮುಡುಪಾಗಿ ಇಟ್ಟು ಜೀವನ ನಡೆಸಿದ ವಿಷಯ ನಮಗೆ ತಿಳಿದುಬರುತ್ತದೆ.

ದಾನಿಯೇಲನ ಪುಸ್ತಕದಲ್ಲಿ 2ನೇ ಅಧ್ಯಾಯವು, ನೆಬುಕದ್ನೆಚ್ಚರನು ಕಂಡ ಭಯಂಕರವಾದ ಕನಸಿನ ಗಂಟಿನ ಅರ್ಥವನ್ನು ಬಿಡಿಸುವ ವಿವರಣೆಯನ್ನು ತಿಳಿಸುತ್ತದೆ. ದಾನಿಯೇಲ 7ನೇ ಅಧ್ಯಾಯವು ನಾಲ್ಕು ದೊಡ್ಡ ಮೃಗಗಳು, ಒಂದು ಚಿಕ್ಕ ಕೊಂಬು ಮತ್ತು ದೇವರ ರಾಜ್ಯ ಇವುಗಳ ಕುರಿತು ಸಮವಾದ ಒಂದು ದರ್ಶನವನ್ನು ಅದರ ವಿವರಣೆಯೊಂದಿಗೆ ಒಳಗೊಂಡಿದೆ. ದಾನಿಯೇಲ 8ನೇ ಅಧ್ಯಾಯವು ಒಂದು ಟಗರು, ಒಂದು ಹೋತ, ಅವುಗಳ ಕೊಂಬುಗಳು ಮತ್ತು ದೇವಜನರು ಇವುಗಳ ನಡುವಿನ ಒಂದು ಹೋಲಿಕೆಯ ವಿಷಯವನ್ನು ತಿಳಿಸುತ್ತದೆ.

ದಾನಿಯೇಲನ ಮನಸ್ಸಾಳದ ಪ್ರಾರ್ಥನೆಯ ಫಲವಾಗಿ, ಅಧ್ಯಾಯ 9 ಬಹುರೂಪದ ದೂರ ಸೇರುವ **"ಎಪ್ಪತ್ತು ವಾರಗಳ ಪ್ರವಾದನೆ"**ಯೊಂದಿಗೆ ಮುಕ್ತಾಯಗೊಳ್ಳುತ್ತದೆ. ಉಳಿದ ಅಧ್ಯಾಯಗಳು ದೇವದೂತನು ದಾನಿಯೇಲನಿಗೆ ಹೇಳಿದ ಸಂಗತಿಗಳನ್ನು ಬಿಚ್ಚಿಟ್ಟಿವೆ. ದೇವದೂತನು ದಾನಿಯೇಲನಿಗೆ–


"ಅಂತ್ಯಕಾಲದಲ್ಲಿ ನಿನ್ನ ಜನರಿಗಾಗುವ ಗತಿಯನ್ನು ನಿನಗೆ ತಿಳಿಸುವದಕ್ಕೋಸ್ಕರ ಬಂದೆನು; ಆ ಕಾಲದ ಸಂಗತಿಯನ್ನು ವ್ಯಕ್ತಪಡಿಸುವ ಇನ್ನೊಂದು ದರ್ಶನವುಂಟು" ಎಂದು ಹೇಳಿದನು (ದಾನಿಯೇಲ 10:14).

ಆದರೂ, ದಾನಿಯೇಲನು ತನಗೆ ಪ್ರಕಟವಾದ ಎಲ್ಲಾ ಸಂಗತಿಗಳನ್ನು ಅರ್ಥಮಾಡಿಕೊಳ್ಳಲಾಗಲಿಲ್ಲ(ದಾನಿಯೇಲ 12:8). ಆದರೆ ಆತನು ತನ್ನ ದೇವರನ್ನು ನಂಬಿದನು! ಆದ್ದರಿಂದ, ದಾನಿಯೇಲನ ಪುಸ್ತಕವು ಸರಿಯಾಗಿ ಈ ಮುಖ್ಯ ಸಂದೇಶದೊಂದಿಗೆ ಮುಕ್ತಾಯಗೊಂಡಿದೆ – ದಾನಿಯೇಲನಿಗೆ ಆತನ ಪ್ರಾಮಾಣಿಕತೆಗೋಸ್ಕರ ಇಡಲ್ಪಟ್ಟಿರುವ ಪ್ರಶಸ್ತಿ :

"ನೀನು ಹೋಗಿ ಅಂತ್ಯದವರೆಗೆ ಇರು; ನೀನು ದೀರ್ಘ ನಿದ್ರೆಯನ್ನು ಹೊಂದಿ ಯುಗ ಸಮಾಪ್ತಿಯಲ್ಲಿ ಎದ್ದು ನಿನಗಾಗುವ ಸ್ವಾಸ್ತ್ಯದೊಳಗೆ ನಿಲ್ಲುವಿ ಎಂದು ಹೇಳಿದನು" (ದಾನಿಯೇಲ 12:13).

ದಾನಿಯೇಲನು ಅಂತ್ಯಕಾಲದಲ್ಲಿ(ಯೇಸುಕ್ರಿಸ್ತನ ಮೂಲಕ ದೇವರು ಮನುಷ್ಯರಿಗೆ ನ್ಯಾಯತೀರ್ಪನ್ನು ಮಾಡುವಾಗ) ಅಲ್ಲಿ ***"ನಿಂತಿರುತ್ತಾನೆ"***. ಏಕಂದರೆ ದಾನಿಯೇಲನು ತನ್ನ ಜೀವಮಾನ ಕಾಲವೆಲ್ಲಾ ದೇವರಿಗೋಸ್ಕರ ನಿಂತಿದ್ದನು.

ದಾನಿಯೇಲನು ಮೊದಲ ಬಾರಿ ದೇವರಿಗೋಸ್ಕರ ನಿಲ್ಲುವ ನಿರ್ಧಾರ ಮಾಡಿದ ಸಂದರ್ಭವು ನಿಮಗೆ ಜ್ಞಾಪಕವಿದೆಯೋ? ದಾನಿಯೇಲನು ದಾನಿಯೇಲನು ಬ್ಯಾಬಿಲೋನಿನಲ್ಲಿ ಸೆರೆಯಾಗಿದ್ದ ಒಬ್ಬ ಹದಿಹರೆಯದ ಯೆಹೂದಿ. ಆತನು ಕಸ್ದೀಯರ ಸಂಸ್ಕೃತಿ ಮತ್ತು ಜೀವನ ಶೈಲಿಗಳೊಂದಿಗೆ ತತ್ವಸಂಬಂಧವಿಲ್ಲದಂತೆ ಇದ್ದದ್ದಕ್ಕೆ ಇದ್ದ ಉದ್ದೇಶವನ್ನು ತಿಳಿಯಲು ಆತನ ಯೆಹೂದದಲ್ಲಿನ ಶ್ರೀಮಂತ/ರಾಜಮಾನ್ಯ ಜೀವನವನ್ನು ತೆಗೆದುಕೊಂಡು ನೋಡಿ– ದಾನಿಯೇಲನು ತನಗೆ ಕೊಟ್ಟ ಆಹಾರವನ್ನು ತಿನ್ನದೆ ತಿರಸ್ಕರಿಸಿದನು– ಬಹುಶಃ ಅದು ಮೂರ್ತಿ ಪೂಜೆಯು ಅಂದರೆ



ಜೀವವಿಲ್ಲದ ದೇವರುಗಳಿಗೆ ಅರ್ಪಿಸಿದ್ದಾಗಿತ್ತು ಮತ್ತು/ಅಥವಾ ಮೋಶೆಯ ಧರ್ಮಶಾಸ್ತ್ರದ ಪ್ರಕಾರ ಅಶುದ್ಧವಾದದ್ದಾಗಿತ್ತು. ದಾನಿಯೇಲನು "ತಾನು ರಾಜನ ಭೋಜನ ಪದಾರ್ಥಗಳನ್ನು ತಿಂದು ರಾಜನ ಪಾನದ ದ್ರಾಕ್ಷಾರಸವನ್ನು ಕುಡಿದು ತನ್ನನ್ನು ಅಶುದ್ದಪಡಿಸಿಕೊಳ್ಳಬಾರದೆಂದು ನಿಶ್ಚಯಿಸಿ ಕಂಚುಕಿಯರ ಅಧ್ಯಕ್ಷನಿಗೆ– ನಾನು ಅಶುದ್ಧನಾಗಲಾರೆ ಕ್ಷಮಿಸು ಎಂದು ವಿಜ್ಞಾಪಿಸುವ ಮೂಲಕ ತನ್ನನ್ನು ಶುದ್ಧನಾಗಿ ಕಾಪಾಡಿಕೊಂಡನು" (ದಾನಿಯೇಲ1:8).

ದಾನಿಯೇಲನು ತನ್ನ ಪ್ರಾಮಾಣಿಕ ಮತ್ತು ದೇವರನ್ನು ಗೌರವಿಸುವ ಗುಣಕ್ಕೆ ದೇವರಿಂದ ಪ್ರತಿಫಲವನ್ನು ಹೊಂದಿದನು, "ದೇವರು ಕಂಚುಕಿಯರ ಅಧ್ಯಕ್ಷನ ಮನಸ್ಸಿನಲ್ಲಿ ದಾನಿಯೇಲನ ಮೇಲೆ ಕನಿಕರವನ್ನೂ ದಯೆಯನ್ನೂ ಹುಟ್ಟಿಸಿದನು" (ದಾನಿಯೇಲ 1:9).

ಜ್ಞಾನ ಮತ್ತು ತಿಳುವಳಿಕೆಗಳೊಂದಿಗೆ ಆಶೀರ್ವದಿಸಲ್ಪಟ್ಟವನು, ಬ್ಯಾಬಿಲೋನಿನ ಎಲ್ಲರಿಗಿಂತಲೂ ಹತ್ತು ಪಟ್ಟು ಉತ್ತಮವಾದವನು. ಆ ದಾನಿಯೇಲನು ತಕ್ಷಣದಲ್ಲಿ ನೆಬುಕದ್ನೆಚ್ಚರನ ಗೂಢವಾದ ಕನಸಿನ ಅರ್ಥವನ್ನು ವಿವರಿಸುವುದಕ್ಕಾಗಿ ಕರೆತರಲ್ಪಟ್ಟನು– ಇಲ್ಲದೆ ಹೋದರೆ ಆತನನ್ನೂ ಸಹ ಉಳಿದ "ಪಂಡಿತರೊಂದಿಗೆ" ಕೊಂದುಹಾಕುವರು. ಈ ಸವಾಲನ್ನು ಉತ್ತರಿಸುವುದಕ್ಕಾಗಿ ದಾನಿಯೇಲನು ತನ್ನ ಜಾಣತನ ಮತ್ತು ವಿವೇಕಕ್ಕೆ ಒತ್ತಾಗಿ (ದಾನಿಯೇಲ 2:14), ತಕ್ಷಣ ಹೋಗಿ ದೇವರಲ್ಲಿ ಭಯಭಕ್ತಿಯುಳ್ಳ ತನ್ನ ಸ್ನೇಹಿತರನ್ನು ಭೇಟಿಮಾಡಿ ಅವರೊಂದಿಗೆ "ಪರಲೋಕದ ದೇವರು ಈ ರಹಸ್ಯದ ವಿಷಯವಾಗಿ ನಮಗೆ ಕೃಪೆ ತೋರಿಸಬೇಕೆಂದು ಆತನನ್ನು ಬೇಡಿಕೊಳ್ಳಿರಿ" ಎಂದು ಹೇಳಿದನು(ದಾನಿಯೇಲ 2:18).




ಪರಲೋಕದ ದೇವರೊಬ್ಬನೇ ರಾಜನ ಈ ರಹಸ್ಯ ಕನಸಿನ ನಿಜವಾದ ಅರ್ಥವಿರಣೆಯನ್ನು ಒದಗಿಸುವವನು ಎಂಬುದನ್ನು ದಾನಿಯೇಲನು ಸ್ಪಷ್ಟವಾಗಿ ತೋರಿಸಿದನು (ದಾನಿಯೇಲ 2:27–30, 45). ಇದರಿಂದ ದೇವರು ದಾನಿಯೇಲನನ್ನು ಮತ್ತೆ ನೆಬುಕದ್ನೆಚ್ಚರನ ಮುಖಾಂತರ ಪುರಸ್ಕರಿಸಿದನು: "ಬಳಿಕ ರಾಜನು ದಾನಿಯೇಲನನ್ನು ದೊಡ್ಡಸ್ತಿಕೆಗೆ ತಂದು ಅವನಿಗೆ ಅಮೂಲ್ಯವಾದ ಬಹುಮಾನಗಳನ್ನು ಕೊಟ್ಟು ಬಾಬೆಲ್ ಸಂಸ್ಥಾನವನ್ನೆಲ್ಲಾ ಅವನಿಗೆ ಅಧೀನಪಡಿಸಿ ಬಾಬೆಲಿನ ವಿದ್ವಂಸರ ಸಕಲ ಮುಖ್ಯಸ್ಥರಿಗೂ ಅವನನ್ನು ಮುಖ್ಯಸ್ಥನನ್ನಾಗಿ ನೇಮಿಸಿದನು" (ದಾನಿಯೇಲ 2:48). ನೆಬುಕದ್ನೆಚ್ಚರನು ದಾನಿಯೇಲನನ್ನು ಮತ್ತೆ ಇನ್ನೊಂದು ಕನಸಿನ ವಿಷಯವಾಗಿ ಕೇಳಿದಾಗ, ಆ ಪ್ರಾಮಾಣಿಕ ಮನುಷ್ಯನು(ದಾನಿಯೇಲನು) ನೇರವಾಗಿ ಹೀಗೆ ಉತ್ತರಿಸಿದನು– "ಓ ಅರಸೇ ಈ ನನ್ನ ಬುದ್ಧಿವಾದವು ನಿನಗೆ ಒಪ್ಪಿಗೆಯಾಗಲಿ– ನೀನು ಧರ್ಮವನ್ನು ಆಚರಿಸಿ ನಿನ್ನ ಪಾಪಗಳನ್ನು ನಾಶಗೊಳಿಸಿ, ಬಡವರಿಗೆ ಕರುಣೆಯನ್ನು ತೋರಿಸಿ ನಿನ್ನ ಅಪರಾಧಗಳನ್ನು ಧಂಸಮಾಡು; ಇದರಿಂದ ನಿನ್ನ ನೆಮ್ಮದಿಯ ಕಾಲವು ಹೆಚ್ಚಾದೀತು" (ದಾನಿಯೇಲ 4:27). ದಾನಿಯೇಲನು ನೀಡಿದ ಈ ಎಚ್ಚರಿಕೆಯ ಮಾತುಗಳು ನೆಬುಕದ್ನೆಚ್ಚರನ್ನು ಬಹಳವಾಗಿ ಬದಲಾಯಿಸಿದವು ಮತ್ತು ಇನ್ನೂ ಹೆಚ್ಚಾಗಿ, ಪರಾತ್ಪರನಾದ ದೇವರನ್ನು ಮೇಲಕ್ಕೆತ್ತುವ ಹಾಗೂ ಸ್ತುತಿಸುವ ಮಾತುಗಳೂ ಹೆಚ್ಚಾಗಿ ಹರಡಿದವು(ದಾನಿಯೇಲ 4:1–3, 34–35 ವಾಕ್ಯಗಳನ್ನು ನೋಡಿ). ಸಾರಿ ಹೇಳಲ್ಪಟ್ಟ ಈ ಮಾತುಗಳು ಎರಡು ಪಟ್ಟು ಮಹತ್ವವಾದದ್ದು. ಏಕಂದರೆ, ದಾನಿಯೇಲನ ಮೂವರು ಸ್ನೇಹಿತರಾಗಿದ್ದ ಶದ್ರಕ್, ಮೇಶಕ್ ಮತ್ತು ಅಬೇದ್‌ನೆಗೋ ಎಂಬುವರು ತನ್ನ ಜೀವವೇ ಕಳೆದು ಹೋಗುವ ಸಂದರ್ಭದಲ್ಲೂ ದೇವರನ್ನೇ ಗೌರವಿಸಿದವರಾದರು. ಈ ಸಂಗತಿಯಿಂದ ಆಗಲೇ ನೆಬುಕದ್ನೆಚ್ಚರನು ತನ್ನ ಮನಸ್ಸಿನಲ್ಲಿ ದೇವರ ಬಗ್ಗೆ ಬಹಳವಾಗಿ ಪ್ರಭಾವಗೊಂಡಿದ್ದನು (ದಾನಿಯೇಲ 3:16–18 ವಾಕ್ಯಗಳನ್ನು ನೋಡಿ). ಇದರ ಫಲವಾಗಿ ನೆಬುಕದ್ನೆಚ್ಚರನು ಇಸ್ರಾಯೇಲ್ಯರ ದೇವರನ್ನು ಕೊಂಡಾಡುವ ಹಾಗೆ ತನ್ನ ಇಡೀ ಸಾಮ್ರಾಜ್ಯಕ್ಕೆ ಆಜ್ಞೆಯನ್ನು ಹೊರಡಿಸಿದ್ದನು ಮತ್ತು ಆ ಮೂರು ವ್ಯಕ್ತಿಗಳನ್ನು ಒಳ್ಳೆಯ ಬಹುಮಾನಗಳಿಂದ ಪುರಸ್ಕರಿಸಿದನು(ದಾನಿಯೇಲ 3:28–30). ಆದ್ದರಿಂದ ಇಸ್ರಾಯೇಲ್ಯರ ಅಧ್ಬುತ ದೇವರನ್ನು ಕೊಂಡಾಡುವ ಹಾಗೆ ತನ್ನ ಇಡೀ ಸಾಮ್ರಾಜ್ಯಕ್ಕೆ ಆಜ್ಞೆ ಮಾಡಿದ್ದು ಇದು ಎರಡನೆಯ ಸಲ!

ಆದಾಗ್ಯೂ, ನೆಬುಕದ್ನೆಚ್ಚರನ ಮೊಮ್ಮಗನಾಗಿದ್ದ ಅರಸ ಬೇಲ್ಶೆಚ್ಚರನು ತನ್ನ ತಾತನ ಉದಾಹರಣೆಯಿಂದ ಕಲಿತುಕೊಳ್ಳಲಿಲ್ಲ. ಗೋಡೆಯ ಮೇಲೆ ದೇವರ ಹಸ್ತಾಕ್ಷರಗಳನ್ನು ನೋಡಿ ಗಂಭೀರವಾದ ಆಘಾತಕ್ಕೊಳಗಾದನು, ಆಗ ಆ ಬರಹವನ್ನು ವಿವರಿಸಲು ದಾನಿಯೇಲನನ್ನು ಬೇಡಿಕೊಂಡನು(ದಾನಿಯೇಲನ ಪುಸ್ತಕದ 5ನೇ ಅಧ್ಯಾಯವು ಪ್ರವಾದಿಯ ಪ್ರಾಮಾಣಿಕತನವನ್ನು ಕುರಿತ ನಿಜ ಸಂಗತಿಗಳನ್ನು ತಿಳಿಸುತ್ತದೆ). ಇಸ್ರಾಯೇಲ್ ದೇವರನ್ನು ಬೇಕೆಂದೇ ಗೇಲಿ ಮಾಡಿದ ರಾಜನ ಮದ್ಯಾಮೋದದಲ್ಲಿ ಮತ್ತು ಅತಿಭೋಗದಲ್ಲಿ ಭಾಗಿಯಾಗುವುದಕ್ಕೆ ದಾನಿಯೇಲನು ನಿರಾಕರಿಸಿದನು. ಇದಲ್ಲದೆ, ಪಶ್ಚಾತ್ತಾಪವಿಲ್ಲದ ಈ ಶೂನ್ಯವಾದ ಅರಸನು ಕೊಡುವ ಯಾವ ಪ್ರಶಸ್ತಿಯನ್ನು ಸಹ ನಿರಾಕರಿಸಿದನು. ಬಂಗಾರ ಬೆಳ್ಳಿ ತಾಮ್ರ ಕಬ್ಬಿಣ ಮರ ಹಾಗೂ ಕಲ್ಲುಗಳಿಂದ ಮಾಡಿದ ದೇವರುಗಳನ್ನು ಹೊಗಳುವುದಕ್ಕೋಸ್ಕರ ಏರ್ಪಡಿಸಿದ್ದ ಕೂಟದ ಮದ್ಯದಲ್ಲಿಯೇ ದಾನಿಯೇಲನು ಜೀವಿಸುತ್ತಿರುವ

ದೇವರಿಗಾಗಿ ನಿಲ್ಲುವ ನಿಶ್ಚಯ ಮಾಡಿದನು ಮತ್ತು ಬ್ಯಾಬಿಲೋನ್ ಸಾಮ್ರಾಜ್ಯವು ತನ್ನನ್ನು ದುಷ್ಟವಾಗಿ ಕದಲಿಸಿ ಆಳಿದವನಿಂದ ಅಂತ್ಯಗೊಳ್ಳುವುದು ಎಂದು ಘೋಷಿಸಿದನು! ಅದೇ ರಾತ್ರಿ ಬ್ಯಾಬಿಲೋನ್ ಸಾಮ್ರಾಜ್ಯವು ಮೇದ್ಯ ಪರ್ಷಿಯನ್ನರ ಸೈನ್ಯದ ದಾಳಿಗೆ ಬಿದ್ದುಹೋಯಿತು.

ಅನೀರೀಕ್ಷತವಾಗಿ, ನಂತರ ಬಂದ ಮೇದ್ಯ ರಾಜನಾದ ದಾರ್ಯಾವೆಶನು(ಪರ್ಶಿಯನ್ ಸೈನ್ಯದ ನಾಯಕತ್ವ ವಹಿಸಿದ್ದನು) ಅಲ್ಲಿನ ಹಳೇ ಆಡಳಿತ ವ್ಯವಸ್ಥೆಯಲ್ಲಿ ಆತನ ನಡಾವಳಿಕೆಗಳಿಂದ ತೋರಿಬಂದ ಹಾಗೆ ದಾನಿಯೇಲನಂತ ಮನುಷ್ಯನ ಬೆಲೆಯನ್ನು ಅರ್ಥ ಮಾಡಿಕೊಂಡನು. ಈಗ ವರ್ಷಗಳೂ ಉತ್ತಮವಾಗಿತ್ತು, ದಾನಿಯೇಲನೂ ಸಹ ತನ್ನ ದೇವರಿಗೆ ಪ್ರತಿದಿನ ಮೂರುಬಾರಿ ಪ್ರಾರ್ಥಿಸುವುದನ್ನು ತಪ್ಪಿಸಲಿಲ್ಲ. ಆತನ ಈ ಸಮರ್ಪಣೆಯ ಫಲವು ಆತನು ರಾಜನಿಗೆ ಮಾಡುತ್ತಿದ್ದ ಸೇವೆಯಲ್ಲಿ ಪ್ರತಿಬಿಂಬವಾಗುತ್ತಿತ್ತು. ರಾಜನು ದಾನಿಯೇಲನನ್ನು ಆತನ ಅಂಥಾ ಉನ್ನತವಾದ ನಡಾವಳಿಕೆಗಾಗಿ ತನ್ನ ಮುಂದೆ ಅರಸನು ಇದ್ದ ಹಾಗೆಯೇ ಗೌರವಿಸಿದನು, ‘‘ಈ ದಾನಿಯೇಲನಲ್ಲಿ ಸರ್ವೋತ್ತಮವಾದ ಆತ್ಮವು ನೆಲೆಸಿದ್ದರಿಂದ ಆವನು ಪ್ರಧಾನರಿಗಿಂತಲೂ ದೇಶಾಧಿಪತಿಗಿಂತಲೂ ಶ್ರೇಷ್ಠನಾಗಿದ್ದನು. ಅರಸನು ಅವನನ್ನು ಸಮಸ್ತ ರಾಜ್ಯದ ಮೇಲೆ ಅಧಿಕಾರಿಯನ್ನಾಗಿ ನೇಮಿಸಲು ನಿರ್ಧರಿಸಿದನು’’ (ದಾನಿಯೇಲ 6:3).

ದಾನಿಯೇಲನ ಉನ್ನತ ಸ್ಥಾನದ ನಾಯಕತ್ವದ ಬಗ್ಗೆ ತಾಳಲಾರದ ಕೆಲವರು ಕುಯುಕ್ತಿ ರೂಪಿಸಿ ದಾನಿಯೇಲನನ್ನು ಸಿಂಹಗಳ ಗವಿಗೆ ಹಾಕಿಸಿದರು. ಆಗ ದಾರ್ಯಾವೆಷನು– , ‘‘ದಾನಿಯೇಲನನ್ನು ಅಲ್ಲಿಂದ ತಪ್ಪಿಸಬೇಕೆಂಬ ಮನಸ್ಸಿನಿಂದ ಇವನನ್ನು ಹೇಗೆ ತಪ್ಪಿಸಲಿ ಎಂದು ಸೂರ್ಯ ಮುಳುಗುವವರೆಗೂ ಪ್ರಯಾಸಪಟ್ಟನು’’ (ದಾನಿಯೇಲ 6:14). ಆದರೆ ದಾರ್ಯಾವೆಷನು ಮೇದ್ಯ ಮತ್ತು ಪರ್ಶಿಯನ್ನರ ಕಾನೂನನ್ನು ತೆಗೆದುಹಾಕಲು ಸಾಧ್ಯವಾಗದೇ ಇರುವಾಗ, ತಾನು ಆ ಸಿಂಹಗಳ ಗವಿಯ ಹತ್ತಿರ ಹೋಗಿ ದಾನಿಯೇಲನಿಗೆ– ‘‘ನೀನು ನಿತ್ಯವೂ ಭಜಿಸುವ ನಿನ್ನ ದೇವರು ನಿನ್ನನ್ನುದ್ಧರಿಸಲಿ!’’ ಎಂದು ಹರಸಿದನು(ದಾನಿಯೇಲ 6:16).





ದೇವರು ಜಯೋತ್ಸವ ಕಾರ್ಯ ಮಾಡಿದನು! ದಾರ್ಯವೆಷನು ಬಹಳ ವಿಸ್ಮಯಗೊಂಡನು ಮತ್ತು ಇಸ್ರಾಯೇಲ್ಯರ ದೇವರನ್ನು ಕೊಂಡಾಡುವುದಕ್ಕಾಗಿ ನೆಬುಕದ್ನೆಚ್ಚರನು ಮಾಡಿದ ಆಜ್ಞೆಗಳಿಗಿಂತ ಉನ್ನತವಾದ ಆಜ್ಞೆಯನು ಇಸ್ರಾಯೇಲ್ಯರ ದೇವರ ಕೊಂಡಾಟಕ್ಕಾಗಿ ತನ್ನ ಇಡೀ ಸಾಮ್ರಾಜ್ಯಕ್ಕೆ ಹೊರಡಿಸಿದನು (ದಾನಿಯೇಲ 6:25–27).

ಒಬ್ಬ ಮನುಷ್ಯನು ದೇವರಿಗಾಗಿ ನಿಂತದ್ದಕ್ಕೋಸ್ಕರ, ‘‘ಭೂಮಿಯಲ್ಲಿ ವಾಸಿಸುವ ಎಲ್ಲಾ ಜನರು, ಎಲ್ಲಾ ರಾಷ್ಟ್ರಗಳು ಮತ್ತು ಎಲ್ಲಾ ಭಾಷೆಗಳು‘‘ ಅಳಿದು ಹೋಗದ ರಾಜ್ಯವನ್ನು ಹೊಂದಿರುವ, ಅಂತ್ಯದವರೆಗೂ ಆಳುವ, ಎಂದೆಂದಿಗೂ ಇರುವ ಹಾಗೂ ಈಗಲೂ **‘‘ಜೀವಸ್ವರೂಪನಾದ ಒಬ್ಬನೇ ದೇವರ’’** ಬಗ್ಗೆ ಕೇಳಿಸಿಕೊಳ್ಳುವರು.

ದಾನಿಯೇಲನ ಜೀವನ ಶೈಲಿಯು ಆತನ ಪ್ರವಾದನೆಗಳ ಮತ್ತು ಅರ್ಥ ವಿವರಿಸುವ ಸಾಮರ್ಥ್ಯಗಳ ಹಾಗೆಯೇ ಬಹಳ ವಿಶೇಷವಾದದ್ದಾಗಿದೆ ಎಂಬುದನ್ನು ನೋಡಿರಿ. ಈತನಿಂದ ಇಬ್ಬೌ ಏಕಾಧಿಪತಿಗಳು(ರಾಜರು) ಬಹಳವಾಗಿ ಪ್ರಭಾವಗೊಂಡರು. ಇದರ ಫಲವಾಗಿ ಈ ಇಬ್ಬರು ರಾಜರು, ಎಲ್ಲದಕ್ಕಿಂತ ಮುಖ್ಯವಾದ ಪ್ರವಾದನ ಸಂದೇಶವನ್ನು ಹೇಳಿದರು: ‘‘ದೇವರು ನಿಜವಾಗಿಯೂ ಯಾರು ಎಂಬುದನ್ನು ತಿಳುಕೊಳ್ಳಿರಿ ಮತ್ತು ಆತನನ್ನು ಸೇವಿಸಿರಿ’’ (ಇಬ್ರಿಯ 11:6ನ್ನು ನೋಡಿ). **‘‘ಮೊಂಡುತನದವರನ್ನು ಎಚ್ಚರಿಸುವುದು, ನಂಬಿಗಸ್ಥರನ್ನು ಪ್ರೋತ್ಸಾಹಿಸುವುದು ಮತ್ತು ದೇವರನ್ನು ತಿಳಿಯುವಂತೆ ಮಾಡುವುದು’’** ಈ ಮೂರು ವಿಷಯಗಳು ಸತ್ಯವೇದದ ಪ್ರವಾದನೆಗಳ ಮುಖ್ಯ ಉದ್ದೇಶಗಳಾಗಿವೆ.

## ಸತ್ಯವೇದದ ಹೊಸ ಒಂಡಂಬಡಿಕೆಯ ಉಪದೇಶವು ಸಹ ಇದೇ ಆಗಿದೆ :–

ಕ್ರಿಸ್ತನ ಶಿಷ್ಯರು ದೇವರಿಂದ ತಮಗೆ ಬೇಕಾದ ಶಕ್ತಿಯನ್ನು ಹೊಂದಿಕೊಳ್ಳುವಾಗ ದುಷ್ಟನ ದಿವಸಗಳನ್ನು ತಾಳಿಕೊಂಡು ನಿಲ್ಲುವರು ಮತ್ತು ಕ್ರಿಸ್ತನು ಹಿಂತಿರುಗಿ ಬರುವವರೆಗೂ ನಿಂತಿರುವರು ಎಂಬುದನ್ನು ಈ ಕೆಳಗಿನ ವಾಕ್ಯ ಭಾಗಗಳು ಸದೃಶವಾಗಿ ತಿಳಿಸುತ್ತವೆ:

‘‘ಕಡೇ ಮಾತೇನೆಂದರೆ, ನೀವು ಕರ್ತನನ್ನೂ ಆತನ ಅತ್ಯಧಿಕವಾದ ಶಕ್ತಿಯನ್ನೂ ಆಶ್ರಯಿಸಿಕೊಂಡವರಾಗಿ ಬಲಗೊಳ್ಳಿರಿ, ವಿರೋಧಿಯ ತಂತ್ರೋಪಾಯಗಳನ್ನು ನೀವು ಎದುರಿಸಿ ನಿಲ್ಲುವುದಕ್ಕೆ ಶಕ್ತರಾಗುವಂತೆ ದೇವರು ದಯಪಾಲಿಸಿರುವ ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ ........ ಆದದರಿಂದ ಕಠಿಣ ಯುದ್ಧವು ನಡೆಯುವ ದಿವಸದಲ್ಲಿ ನೀವು ಅವುಗಳನ್ನು ಎದುರಿಸಿ ಮಾಡಬೇಕಾದದ್ದೆಲ್ಲವನ್ನೂ ಮಾಡಿ ನಿಲ್ಲನು ಶಕ್ತರಾಗುವಂತೆ ದೇವರ ಸರ್ವಾಯುಧಗಳನ್ನು ತೆಗೆದುಕೊಳ್ಳಿರಿ’’ (ಎಫೆಸದವರಿಗೆ 6:10–13).

‘‘ನಿಮ್ಮ ವಿಷಯದಲ್ಲಿ ಜಾಗರೂಕರಾಗಿರ್ರಿ. ಅತಿಭೋಜನದ ಮದಡಿನಿಂದಲೂ ಅಮಲಿನಿಂದಲೂ ಪ್ರಪಂಚದ ಚಿಂತೆಗಳಿಂದಲೂ ನಿಮ್ಮ ಹೃದಯಗಳು ಭಾರವಾಗಿರಲಾಗಿ ಆ ದಿವಸವು ನಿಮ್ಮ ಮೇಲೆ ಉರ್ಲಿನಂತೆ ಫಕ್ಕನೆ ಬಂದೀತು. ಆ ದಿವಸವು ಭೂನಿವಾಸಿಗಳೆಲ್ಲರ ಮೇಲೆ ಬರುವುದು. ಆದರೆ ಬರುವುದಕ್ಕಿರುವ ಇವೆಲ್ಲವುಗಳೊಳಗಿಂದ ತಪ್ಪಿಸಿಕೊಳ್ಳುವುದಕ್ಕೆ ಮನುಷ್ಯಕುಮಾರನ ಮುಂದೆ ನಿಂತುಕೊಳ್ಳುವುದಕ್ಕೆ ನೀವು ಪೂರ್ಣ ಶಕ್ತರಾಗುವಂತೆ ಎಲ್ಲಾ ಕಾಲದಲ್ಲಿಯೂ ದೇವರಿಗೆ ವಿಜ್ಞಾಪನೆ ಮಾಡಿಕೊಳ್ಳುತ್ತಾ ಎಚ್ಚರವಾಗಿರ್ರಿ’’ (ಲೂಕ 21:34–36).

●●●●●●●●●●●●

# ಐವತ್ತನೆಯ ಹುಟ್ಟುಹಬ್ಬವನ್ನಾಚರಿಸಿದ ಒಂದು ಪ್ರಾಚೀನ ದೇಶ

ಐವತ್ತು ವರ್ಷಗಳಿಗೂ ಹಿಂದೆ **ಇಸ್ರಾಯೇಲ್** ಎಂಬ ಹೆಸರು ಚರಿತ್ರೆ ಪುಸ್ತಕಗಳ ಪುಟಗಳ ಮಧ್ಯೆ ಮಾತ್ರ ಕಾಣಸಿಗುತ್ತಿತ್ತು. ಈ ದೇಶವು ಕ್ರಿ.ಶ. ಮೊದಲನೆಯ ಶತಮಾನದಲ್ಲಿಯೇ ರೋಮನರಿಂದ ನಾಶ ಮಾಡಲ್ಪಟ್ಟಿತ್ತು, ಹಾಗೂ ಆ ದೇಶದ ಜನರಾದ ಯೆಹೂದ್ಯರು ಎಲ್ಲಾ ದಿಕ್ಕುಗಳಿಗೂ ಚದರಿಹೋಗಿ, ಮುಂದಿನ ಹತ್ತೊಂಬತ್ತು ಶತಮಾನಗಳ ಕಾಲ ಯೂರೋಪಿನ ಆದ್ಯಂತ ಮತ್ತು ಪ್ರಪಂಚದಾದ್ಯಂತ ಅಲೆಮಾರಿಗಳಾಗಿ ಜೀವಿಸಿದರು. ಆದರೆ 1948ನೇ ಇಸವಿಯ ಮೇ ತಿಂಗಳ 14ರಂದು ಎಲ್ಲವೂ ಬದಲಾದವು. ಈ ದೇಶದ ಸ್ಥಾಪನೆಯನ್ನು ಕುರಿತು ಡೇವಿಡ್ ಬೆನ್ ಗುರಿಯನ್ ಅವರು ಆಳವಾದ ಭಾವುಕತೆಯಿಂದ ಪ್ರಪಂಚಕ್ಕೆಲ್ಲಾ ಕೇಳಿಸುವಂತೆ ವಿಧಿಪೂರ್ವಕವಾಗಿ ಸಾರಿದರು. ಒಂದು ದೇಶವು ಮರುಹುಟ್ಟನ್ನು ಪಡೆದಿತ್ತು.



ಇಂದಿನ ಇಸ್ರಾಯೇಲ್ ದೇಶದಲ್ಲಿ ಸುಮಾರು 6 ದಶಲಕ್ಷ ಜನರು ವಾಸಿಸುತ್ತಿದ್ದಾರೆ, ಇದರ ಸ್ಥಾನ ಪ್ರಪಂಚದ ಹನ್ನೆರಡು ಅತಿಮುಂದುವರೆದ ದೇಶಗಳಲ್ಲಿ ಒಂದಾಗಿದೆ. ಈ ದೇಶದ 1990–94ರ ಸಾಲಿನ ಕೈಗಾರಿಕಾ ಉತ್ಪನ್ನದ ಏರಿಕೆಯು ಶೇ.32.5 ಆಗಿದ್ದು, ಇದು ಪಾಶ್ಚಾತ್ಯ ಆರ್ಥಿಕರಂಗದ ಎರಡನೆಯ ಅತಿಹೆಚ್ಚಿನ ದರ ಏರಿಕೆಯಾಗಿತ್ತು(ಕೊರಿಯ ದೇಶವು ಮೊದಲನೆಯ ಸ್ಥಾನ ಪಡೆದಿದ್ದು ಇದರ ಏರಿಕೆಯು ಶೇ.34.5 ಆಗಿದ್ದಿತು). ಈ ದೇಶದ ವಜ್ರದ ಕೈಗಾರಿಕೆಯು 1996ರಲ್ಲಿ ಪ್ರಪಂಚದ ಸಾಣೆ ಹಿಡಿದ ರತ್ನಗಳ ಒಟ್ಟು ಉತ್ಪನ್ನದ ಶೇ.80% ಉತ್ಪಾದನೆಗೆ ಕಾರಣವಾಗಿದ್ದು, ಪ್ರಪಂಚಕ್ಕೆ ಅತಿಹೆಚ್ಚಿನ ಪ್ರಮಾಣದಲ್ಲಿ ಯುದ್ಧ ಸಾಮಾಗ್ರಿಯನ್ನು ಪೂರೈಸುವ ದೇಶಗಳಲ್ಲಿ ಐದನೆಯ ಸ್ಥಾನಗಳಿಸಿದೆ. ಕೇವಲ ಐವತ್ತು ವರ್ಷಗಳಲ್ಲಿ ಇಂತಹ ಪ್ರಗತಿಯು ವಿಸ್ಮಯಕಾರಿಯಾಗಿದೆ.

**ಯೂರೋಪಿನಲ್ಲಿ ಬೀಜ ಬಿತ್ತುವುದು :–**

ಅಮರರಂತೆ ಕಾಣುವ ಈ ಜನಾಂಗದ ರಾಷ್ಟ್ರಪಿತನು ತಿಯೊಡೊರ್ ಹೆರ್ಝ್ಲ್ ಎಂದು ಅನೇಕರು ಭಾವಿಸುತ್ತಾರೆ. ಈತನು ಬುಡಾಪೆಸ್ಟ್ ಎಂಬಲ್ಲಿ 1860ರಲ್ಲಿ ಹುಟ್ಟಿದನು ಮತ್ತು ಚಿಕ್ಕಂದಿನಿಂದಲೇ ಯೆಹೂದ್ಯರ ಸಮಸ್ಯೆಯ ವಿಷಯದ ಬಗ್ಗೆ ಚಿಂತಿಸಲಾರಂಭಿಸಿದ್ದನು. ಯೆಹೂದ್ಯರ ವಿರುದ್ಧ ಹಿಂಸಾಚಾರವು ಸಾಧಾರಣವಾಗಿದ್ದ ಯೂರೋಪಿನ ಆ ಭಾಗದಲ್ಲಿ, ಅವರ ಸಮಸ್ಯೆಯನ್ನು ಬಿಡಿಸುವ ಪ್ರಯತ್ನಕ್ಕಿಂತ ಅವರನ್ನು ಉಚ್ಛಾಟಿಸುವುದೇ ಸುಲಭೋಪಾಯ ಆಗಿತ್ತು. 1894ನೇ ಇಸವಿಯು ಹೆರ್ಝ್ಲ್‌ನ ಜೀವನದ ಗುರಿಯು ಬದಲಾವಣೆ ಹೊಂದಿದ



ವರ್ಷವಾಗಿತ್ತು. ಆ ವರ್ಷ ಯೆಹೂದ್ಯ ಮೂಲದ ಒಬ್ಬ ಯುವ ಫ್ರೆಂಚ್ ಅಧಿಕಾರಿಯನ್ನು ಜರ್ಮನರಿಗೆ ಸೇನಾ ಮಾಹಿತಿಯನ್ನು ಬಯಲು ಮಾಡಿದನೆಂಬ ಸುಳ್ಳು ಆಪಾದನೆಯನ್ನು ಹೊರಿಸಿ, ವಿಚಾರಣೆಗೆ ಗುರಿಪಡಿಸಿ, ಶಿಕ್ಷಿಸಲಾಯಿತು. ಈ ವಿಚಾರಣೆ ನಡೆಯುತ್ತಿದ್ದ ಸಮಯದಲ್ಲಿ ಎಲ್ಲೆಡೆ ವ್ಯಾಪಿಸಿದ ಯೆಹೂದಿ ವಿರೋಧಿ ಧೋರಣೆಯು ಹೆರ್ಝ್ಲ್‌ನ ಮನಸ್ಸಿನಲ್ಲಿ ಆಳವಾದ ರಾಷ್ಟ್ರಾಭಿಮಾನದ ಭಾವನೆಗಳನ್ನು ಹುಟ್ಟಿಸಿದವು. “**ಯೆಹೂದ್ಯ ಸಮಸ್ಯೆ**”ಗೆ ಉತ್ತರ ರಾಜಕೀಯವಾಗಿ ಮಾತ್ರ ಸಾಧ್ಯ ಎಂಬ ನಿರ್ಧಾರಕ್ಕೆ ಬಂದ ಆತನು ತನ್ನ ವಿಚಾರಗಳನ್ನು ತನ್ನ “**ದೆರ್ ಜುದಾನ್ ಸಾತ್**” ಅಥವಾ “**ಯೆಹೂದ್ಯ ರಾಷ್ಟ್ರ**” ಎಂಬ ಪುಸ್ತಕದಲ್ಲಿ ಪ್ರಕಟಪಡಿಸಿದನು. ಮೊದಲ ಬಾರಿಗೆ ಪ್ಯಾಲಸ್ತೀನ್ ಪ್ರದೇಶದಲ್ಲಿ ಯೆಹೂದ್ಯರಿಗೊಂದು ಸ್ವದೇಶವನ್ನು ಕಟ್ಟುವ ವಿಚಾರವು ವಿವರವಾಗಿ ಎಲ್ಲಾ ಯೋಜನೆಗಳ ನಕ್ಷೆಯೊಂದಿಗೆ ರೂಪುಗೊಂಡಿತು. 1897ನೇ ಇಸವಿಯಲ್ಲಿ ಮೊದಲನೆಯ “**ಚೀಯೋನಿನ ಕಾಂಗ್ರೆಸ್**” ಎಂಬ ಯೆಹೂದ್ಯರ ಸಮಾವೇಶವನ್ನು ಹೆರ್ಝ್ಲನು ಸ್ವಿಟ್ಜರ್ಲೆಂಡ್ ದೇಶದ ಬಾಸೆಲ್ ಎಂಬಲ್ಲಿ ಆಯೋಜಿಸಿ ಅದರ ಅಧ್ಯಕ್ಷತೆಯನ್ನು ವಹಿಸಿದನು. ಅಧಿವೇಶನವು ಮುಗಿದ ನಂತರ ಹೆರ್ಝ್ಲನು ತನ್ನ ಡೈರಿಯಲ್ಲಿ ಹೀಗೆ ಒಕ್ಕಣೆ ಬರೆದಿದ್ದಾನೆ– “ಬಾಸೆಲ್ ಕಾಂಗ್ರೆಸ್ಸಿನ ಬಗ್ಗೆ ಒಂದೇ ವಾಕ್ಯದಲ್ಲಿ ಹೇಳಬೇಕೆಂದರೆ, ಹೀಗೆ ಹೇಳಿಯೇನು–ಬಾಸೆಲ್ ನಲ್ಲಿ ನಾನು ಹೊಸ ಯೆಹೂದ್ಯ ರಾಷ್ಟ್ರವನ್ನು ಸೃಷ್ಟಿಸಿದೆನು–ಹೀಗೆಂದು ಬಹಿರಂಗವಾಗಿ ಹೇಳಿದರೆ ನಗೆಪಾಟಲಿಗೆ ಗುರಿಯಾದೇನು. ಆದರೆ ಇನ್ನು 5 ವರ್ಷಗಳ ನಂತರ ಅಥವಾ ಮುಂದಿನ 50 ವರ್ಷಗಳಲ್ಲಿಯಾದರೂ ಖಂಡಿತವಾಗಿ ಎಲ್ಲರೂ ನನ್ನ ಮಾತನ್ನು ಒಪ್ಪಿಕೊಳ್ಳುತ್ತಾರೆ”.



Theodor Herzl:
Founder of Political Zionism

ಈ ಮೊದಲನೆಯ ಮಹತ್ವಪೂರ್ಣ ಸಭೆಯು ಪ್ರಪಂಚದಾದ್ಯಂತ ಇದ್ದ ಯೆಹೂದ್ಯರ ಆಕಾಂಕ್ಷೆಗಳಿಗೆ ಆಜ್ಯ ಸುರಿಯಿತು. ಇದಾದ ಹದಿನೇಳು ವರ್ಷಗಳ ನಂತರ ಮೊದಲನೆಯ ಮಹಾಯುದ್ಧ ಆರಂಭವಾಯಿತು. ಅದರ ಫಲಿತಾಂಶವು ಹೆರ್ಝ್ಲ್‌ನ ಕನಸನ್ನು ಮತ್ತೊಂದು ಹೆಜ್ಜೆ ನೆನಸಿ ನಡೆಗೆ ನಡಿಸಿತು. 1917ರಲ್ಲಿ ಜನರಲ್ ಆಲೆನ್‌ಬಿಯವರ ಸೈನ್ಯವು ಯೆರೂಸಲೇಮ್ ಮತ್ತು ಪ್ಯಾಲಸ್ತೀನ್ ದೇಶಗಳನ್ನು ಟರ್ಕರ ಮುಷ್ಠಿಯಿಂದ ಬಿಡಿಸಿತು. ಅದೇ ಸಂದರ್ಭದಲ್ಲಿ ಬ್ರಿಟಿಷ್ ಸರ್ಕಾರವು ಬಾಲ್ಫೋರ್ ಘೋಷಣೆಯನ್ನು ಹೊರಡಿಸಿತು. ಈ ಘೋಷಣೆಯಲ್ಲಿ ಯೆಹೂದ್ಯ ಜನಾಂಗಕ್ಕೆ ಪ್ಯಾಲಸ್ತೀನಿನಲ್ಲಿ ರಾಷ್ಟ್ರೀಯ ವಸತಿಯೊಂದನ್ನು ಏರ್ಪಡಿಸುವಲ್ಲಿ ತನಗಿದ್ದ ಬದ್ಧತೆಯನ್ನು ಬಹಿರಂಗಪಡಿಸಿತು. ಮೊದಲ ಚಿಯೋನ್ ಕಾಂಗ್ರೆಸ್ ಅಧಿವೇಶನ ನಡೆದು 50 ವರ್ಷಗಳ ನಂತರ 1947ನೇ ಇಸವಿಯಲ್ಲಿ ಸರ್ವರಾಷ್ಟ್ರಗಳ ಒಕ್ಕೂಟವು ಪ್ಯಾಲಸ್ತೀನ್

ದೇಶವನ್ನು ಯೆಹೂದಿ ಹಾಗೂ ಅರಬರ ವಿಭಾಗಗಳಾಗಿ ಬೇರ್ಪಡಿಸಿದರು. ಮುಂದಿನ ವರ್ಷ ಅಂದರೆ 1948ನೇ ಇಸವಿಯ ಮೇ 14ರಂದು ಡೇವಿಡ್ ಬೆನ್ ಗುರಿಯನ್ ಅವರು ಇಸ್ರಾಯೇಲ್ ಅನ್ನು ಸ್ವತಂತ್ರ ರಾಷ್ಟ್ರವೆಂದು ಘೋಷಿಸಿದರು. ಒಬ್ಬ ಪತ್ರಕರ್ತನು ಬರೆದ ಹಾಗೆ "1878 ವರ್ಷಗಳನ್ನು ಯೆಹೂದ್ಯರು ದೇಶಾಂತರ ವಾಶದಲ್ಲಿ ಕಳೆದ ಮೇಲೆ, ಅವರ ದೇಶದ ಪುನರ್ಜನ್ಮವನ್ನು ಸಾರಲು ಕೇವಲ 32 ನಿಮಿಷಗಳು ಸಾಕಾದವು", ನಂತರದ್ದೆಲ್ಲಾ ಇತಿಹಾಸ!

ತಿಯೊಡೋರ್ ಹೆರ್ಝೆಲ್ ನನ್ನು ವಾಸ್ತವವಾದಿಯೆಂದೂ, ದಾರ್ಶನಿಕನೆಂದೂ ವರ್ಣಿಸಲಾಗಿದೆ. ಆತನು ಬರೆದ ಪುಸ್ತಕದ ಕೊನೆಯ ವಾಕ್ಯವು ಜನಪ್ರಿಯ ಚಿಯೋನೀ ಪ್ರಚಾರ ವಾಕ್ಯವಾಯಿತು. ಅದು ಹೀಗಿದೆ– "ನೀನು ಏನನ್ನಾದರೂ ಮಾಡಬೇಕೆಂದು ಸಂಕಲ್ಪಿಸಿದರೆ, ಅದು ಕೇವಲ ಕನಸಾಗುವುದಿಲ್ಲ". ಇದೊಂದು ಮಹಾ ಅದ್ಭುತವಲ್ಲವೇ? ನಮ್ಮನ್ನು ನಾವೇ ಕೇಳಿಕೊಳ್ಳಬೇಕಾದ ಪ್ರಶ್ನೆಯೆಂದರೆ, ಇಂತಹ ಅದ್ಭುತಕಾರ್ಯವು ಹೇಗೆ ಸಾಧ್ಯವಾಯಿತು? ಚರಿತ್ರೆಯಲ್ಲಿ ಇನ್ಯಾವ ಜನಾಂಗವೂ ವಾಸ್ತವ್ಯವೇ ಇಲ್ಲದಂತೆ ತೊಡೆದು ಹಾಕಲ್ಪಟ್ಟು, ಜಗತ್ತಿನಲ್ಲೆಲ್ಲಾ ಚದರಿಹೋಗಿ, ತಂಗಿದ ದೇಶಗಳಲ್ಲೆಲ್ಲಾ ಹಿಂಸಾಚಾರ ಮತ್ತು ಅವಮಾನಕ್ಕೊಳಗಾಗಿ ಹೆಚ್ಚುಕಡಿಮೆ ಅಳಿಸಲ್ಪಟ್ಟರೂ, ಹೇಗೋ ಜೀವಹಿಡಿದುಕೊಂಡು, ಬದುಕುಳಿದು, ಸಾವಿರಾರು ವರ್ಷಗಳ ನಂತರ ಮತ್ತೆ ತಮ್ಮ ಹಳೆಯ ದೇಶದಲ್ಲಿಯೇ ಪುನಃ ಸ್ಥಾಪಿಸಲ್ಪಟ್ಟ ಉದಾಹರಣೆ ಇಲ್ಲ. ಇನ್ನೂ ವಿಶೇಷವೇನೆಂದರೆ, ಅದರ ಪುನರ್ಜನ್ಮದ ನಂತರವೂ ಸುತ್ತಲಿನ ಅರಬ್ ರಾಷ್ಟ್ರಗಳೊಂದಿಗೆ ನಾಲ್ಕು ಯುದ್ಧಗಳನ್ನು ಈ ಪುಟ್ಟ ದೇಶವು ಮಾಡಿ ಗೆದ್ದಿದೆ.




ಮಾರ್ಕ್ ಟ್ವೆನ್ ಒಮ್ಮೆ "**ಯೆಹೂದ್ಯರ ಅಮರತ್ವದ ರಹಸ್ಯವೇನು?**" ಎಂದು ಪ್ರಶ್ನೆಸಿದ್ದನು. ನಿಜ, ಈ ರಹಸ್ಯವೇನು? ಹೆರ್ಝೆಲ್ ನಂತಹ ಮನುಷ್ಯರು ಕನಸುಕಂಡು, ಛಲದಿಂದ ಅದನ್ನು ನನಸಾಗಿಸಿದ್ದೇ? ಅಧುನಿಕ ಇಸ್ರಾಯೇಲ್ ದೇಶವು ಒಂದು ಅದ್ಭುತವೇ ಸರಿ, ಅದರಲ್ಲಿ ಸಂಶಯವಿಲ್ಲ, ಆದರೆ ಹೇಗೆ? ಯೆಹೂದಿ ಜನಾಂಗದ ರಹಸ್ಯವೇನು?

## ಎಲ್ಪಿಸ್ ಇಸ್ರಾಯೇಲ್ :–

ತಿಯೊಡೋರ್ ಹೆರ್ಝೆಲ್ ಹುಟ್ಟುವ 17 ವರ್ಷಗಳ ಮೊದಲೇ ಒಂದು ಪುಸ್ತಕವು ಬರೆಯಲ್ಪಟ್ಟಿತ್ತು. ಇದು ಡಾ.ಜಾರ್ ಥಾಮಸ್ ಎಂಬುವರು ಬರೆದ "**ಎಲ್ಪಿಸ್ ಇಸ್ರಾಯೇಲ್**" (ಇಸ್ರಾಯೇಲಿನ ನಿರೀಕ್ಷೆ) ಎಂಬ ಹೆಸರಿನ ಪುಸ್ತಕ. ಈ ಬರಹಗಾರನ ಬಗ್ಗೆ ಹೆಚ್ಚಿನವರಿಗೆ ಗೊತ್ತಿಲ್ಲ ಮತ್ತು ಹೆರ್ಝೆಲ್ ನ ಬರಹಗಳಿಗೆ ಹೋಲಿಸಿದರೆ ಈತನ ಬರಹಗಳ ಪ್ರಭಾವವು ಜನರ ಮೇಲೆ ಕಡಿಮೆಯೇ. ಆದರೆ ಈತನ ವಿಚಾರಗಳು ಗಮನಿಸತಕ್ಕವುಗಳಾಗಿವೆ.



***ನಾವು ಹೀಗೆಂದು ಓದುತ್ತೇವೆ*** – "ಯೇಸುಕ್ರಿಸ್ತನು ಹಿಂದಿರುಗುವ ಮೊದಲು ಯೆಹೂದ್ಯರ ಭಾಗಶಃ ಮತ್ತು ಪ್ರಾಥಮಿಕ ಪುನಃಸ್ಥಾಪನೆ ಇರುತ್ತದೆ. ದೇವರ ರಾಜ್ಯ ಬಂದಾಗ ಇದು ಇನ್ನುಳಿದ ಕುಲಗಳ ಪುನಸ್ಥಾಪನೆಯ ಚಟುವಟಿಕೆಯ ಕೇಂದ್ರವಾಗಿರುತ್ತದೆ. ಯೇಸುಕ್ರಿಸ್ತನು ಬರುವ ಮುಂಚಿನ ಪ್ಯಾಲಸ್ತೀನಿನ ಆಕ್ರಮಣವು ಕೇವಲ ರಾಜಕೀಯ ತತ್ವಗಳನ್ನು ಆಧರಿಸಿರುತ್ತದೆ. ಯೆಹೂದ್ಯರು ತಮ್ಮ ದೇಶಕ್ಕೆ ಹಿಂದಿರುಗುವಾಗ ಅವರಿಗೆ ಯೇಸುಕ್ರಿಸ್ತನ ಸತ್ಯತೆಯ ಬಗ್ಗೆ ಮತ್ತು ಅವನು ಮೆಸ್ಸೀಯನೆಂಬುದರಲ್ಲಿ ಯಾವ ನಂಬಿಕೆಯೂ ಇರುವುದಿಲ್ಲ. ತಮ್ಮದೇ ಆರ್ಥಿಕ ಒಕ್ಕೂಟವನ್ನು ಸ್ಥಾಪಿಸುವ ಉದ್ದೇಶದಿಂದ ವ್ಯವಸಾಯಗಾರರೂ, ವ್ಯಾಪಾರಿಗಳೂ ತಮ್ಮ ಹೊಸದೇಶಕ್ಕೆ ವಲಸೆ ಬರುತ್ತಾರೆ. ಇದಕ್ಕಿಂತ ಹೆಚ್ಚಾಗಿ ಬ್ರಿಟಿಷ್ ಅಧಿಕಾರದ ಬಲದಿಂದ ಭಾರತ ಮುಂತಾದ ದೇಶಗಳೊಂದಿಗೆ ಚಿನ್ನ, ಬೆಳ್ಳಿಗಳ ವ್ಯಾಪಾರವನ್ನು ರೂಢಿಸಿಕೊಂಡು ಸುರಕ್ಷಿತವಾಗಿ ಹೈನು ಮತ್ತಿತರ ಉತ್ಪನ್ನಗಳನ್ನು ವೃದ್ಧಿಪಡಿಸಬೇಕೆಂಬ ಆಲೋಚನೆಯೂ ಇರುತ್ತದೆ".

"ಈಗ ಬ್ರಿಟಿಷ್ ಸರ್ಕಾರದಲ್ಲಿ ವಿದೇಶಾಂಗ ನೀತಿಯನ್ನು ರೂಪಿಸತಕ್ಕ ಜನರು ಪುಣ್ಯಭೂಮಿಯಲ್ಲಿ ಅಧಿಕಾರ ನಡೆಸುವ ಮತ್ತು ಅಲ್ಲಿ ಯೆಹೂದ್ಯರ ಪುನರ್ವಸತಿಯನ್ನು ಉತ್ತೇಜಿಸುವ ಆಲೋಚನೆ ಹೊಂದಿದ್ದಾರೆಯೇ ಎಂಬುದು ನನಗೆ ತಿಳಿಯದು. ಅಂತಹ ಆಲೋಚನೆಗಳನ್ನು ಅವರು ಹೊಂದಿದ್ದರೂ ಅದಕ್ಕೆ ಯಾವ ಮಹತ್ವವೂ ಇಲ್ಲ, ಏಕಂದರೆ ಇದುವರೆಗೆ ಭೂಮ್ಯಾಕಾಶಗಳು ಒಟ್ಟಾಗಿ ಪ್ರಯತ್ನಿಸಿದರೂ ಅವರಿಂದ ಮಾಡಿಸಲು ಅಸಾಧ್ಯವಾದ ಕಾರ್ಯಗಳನ್ನು ಈಗ ಅವರು ಮಾಡುವಂತೆ, ಬೇಗದಲ್ಲೇ ನಡೆಯಲಿರುವ ಘಟನೆಗಳು, ಸಂಗತಿಗಳು ಅವರನ್ನು ಬಲಾತ್ಕರಿಸಲಿವೆ ............ ಬ್ರಿಟನ್ ದೇಶವು ಹಿಡಿಯಬೇಕಾದ ಮಾರ್ಗವನ್ನು ದೇವರ ಬೆರಳು ಸೂಚಿಸುತ್ತಿದೆ. ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ, ಏಕಂದರೆ ಆ ವಿಪತ್ತು ಅವರ ಮೇಲೆ ಎರಗಿದಾಗ ಈ ಸರ್ಕಾರಿ ಸಲಹೆಗಾರರು ಅದೇ ಮಾರ್ಗವನ್ನು ಸುಮ್ಮನೆ ಒಪ್ಪಿಕೊಳ್ಳುವುದು ಮಾತ್ರವಲ್ಲ, ಅತುರದಿಂದ ಸ್ವೀಕರಿಸಲಿದ್ದಾರೆ".

***ಈ ಮಾತುಗಳ ಸಾರಾಂಶವನ್ನು ನಾವು ಹೀಗೆ ಪಟ್ಟಿ ಮಾಡಬಹುದು:***

1) ಭವಿಷ್ಯದಲ್ಲಿ ಪ್ಯಾಲಸ್ತೀನ್ ಪ್ರದೇಶದಲ್ಲಿ ಯೆಹೂದ್ಯರ ಪುನರ್ವಸತೀಕರಣ ನಡೆಯಲಿದೆ.

2) ಈ ಪುನರ್ವಸತಿಯು ಯೇಸುಕ್ರಿಸ್ತನ ಹಿಂದಿರುಗುವಿಕೆಗೆ ಮೊದಲೇ ನಡೆಯಲಿದೆ.

3) ಯೆಹೂದ್ಯರು ಹಿಂದಿರುಗಿ ಬರುವಾಗ, ಯೇಸುಕ್ರಿಸ್ತನು ಮೆಸ್ಸೀಯನೆಂಬ ವಿಷಯಕ್ಕೆ ಅವಿಶ್ವಾಸ ಹೊಂದಿರುತ್ತಾರೆ.

4) ಪ್ಯಾಲಸ್ತೀನ್ ಪ್ರದೇಶದಲ್ಲಿ ಯೆಹೂದ್ಯರ ಪುನರ್ವಸತಿ ಏರ್ಪಡಲು ಬ್ರಿಟನ್ ದೇಶವು ಕಾರಣಕರ್ತವಾಗಿರುತ್ತದೆ.

ಇಸ್ರಾಯೇಲ್ ದೇಶದ ಪುನಃಸ್ಥಾಪನೆಗೆ 100 ವರ್ಷಗಳಷ್ಟು ಮೊದಲು ಈ ಮಾತುಗಳು ಬರೆಯಲ್ಪಟ್ಟವು. ಆ ಸಮಯದಲ್ಲಿ ಪ್ಯಾಲಸ್ತೀನ್ ಪ್ರದೇಶದಲ್ಲಿ ಸುಮಾರು 10,000 ಯೆಹೂದ್ಯರು ಮಾತ್ರವೇ ನೆಲಸಿದ್ದರು. ಈ ಮಾತುಗಳನ್ನು ಬರೆಯುವ ಪ್ರೇರಣೆ ಉಂಟಾದಾಗ ಡಾ.ಥಾಮಸ್ ಅವರಿಗೆ ಯಾವುದೇ ಕಾರ್ಯಸೂಚಿಯ ಪ್ರಕಾರವೂ, ಚೀಯೋನಿವಾದದ

ತೀವ್ರಪ್ರಭಾವದಿಂದಲೂ ಬರೆಯದೆ, ಸತ್ಯವೇದದ ಮೇಲಿನ ವಿಶ್ವಾಸದಿಂದ ಮತ್ತು "**ದೇವರಹಸ್ತ**"ದ ಮಾರ್ಗದರ್ಶನದಿಂದ ಬರೆದರು. ಅವರ ಈ ಅದ್ಭುತ ಪ್ರವಾದನೆಗಳಿಗೆ ಹಳೇ ಒಡಂಬಡಿಕೆಯ ಪ್ರವಾದಿಗಳ ಬರಹಗಳೇ ಅಡಿಪಾಯವಾಗಿದ್ದವು. ಈ ಬರಹಗಳಲ್ಲಿ ಕೊನೆಕೊನೆಯವೂ ಕೂಡ ಯೇಸುಕ್ರಿಸ್ತನು ಹುಟ್ಟುವ ಕಾಲಕ್ಕೆ ಕನಿಷ್ಠಪಕ್ಷ 200 ವರ್ಷಗಳಷ್ಟು ಹಳೆಯದಾಗಿದ್ದವು.

## ಇಸ್ರಾಯೇಲಿಗೆ ದೇವರಿತ್ತ ಭರವಸೆ :-

ಇಸ್ರಾಯೇಲ್ ರಾಷ್ಟ್ರವು ಒಂದು ಆಧುನಿಕ ಅದ್ಭುತವೇ ಸರಿ! ಏಕಂದರೆ ಇಂತಹ ದೇಶವೊಂದು ಹುಟ್ಟಿತು ಎಂಬುದಕ್ಕಲ್ಲ, ಆದರೆ ದೇವರು ಹೇಳಿದ್ದರಿಂದ ಸಂಭವಿಸಿತು ಎಂಬುದಕ್ಕಾಗಿ. ದೇವರ ಆದೇಶವು ಬಹಳ ಹಿಂದೆಯೇ ಹೊರಟಿತ್ತು- "ಜನಾಂಗಗಳೇ, ಯೆಹೋವನ ವಾಕ್ಯವನ್ನು ಕೇಳಿರಿ, ದೂರದ್ವೀಪಗಳಲ್ಲಿ ಸಾರಿರಿ; ಇಸ್ರಾಯೇಲ್ಯರನ್ನು ಚದುರಿಸಿದಾತನು ಕುರುಬನು ಮಂದೆಯನ್ನು ಕಾಯುವಂತೆ ಅವರನ್ನು ಕೂಡಿಸಿ ಕಾಪಾಡುವನು, ಎಂದು ಪ್ರಕಟಿಸಿರಿ" (ಯೆರೆಮೀಯ 31:10). ಇಸ್ರಾಯೇಲ್ ಪುನಃ ಅಸ್ಥಿತ್ವಕ್ಕೆ ಬರುವುದರ



As foreseen by John Thomas in his book "Elpis Israel" the British gained the sovereignty of the Holy Land during the First World War. Here General

ಬಗ್ಗೆ ದೇವರು ಭರವಸೆಯಿತ್ತಿದ್ದಾನೆ. ಇನ್ನೊಂದು ಕಡೆ ಯೆಹೆಜ್ಕೇಲನೆಂಬ ಪ್ರವಾದಿಯು ಹೀಗೆಂದಿದ್ದಾನೆ- "ಕರ್ತನಾದ ಯೆಹೋವನು ಇಂತೆನ್ನುತ್ತಾನೆ-ನಾನು ಅವರನ್ನು ದೂರವಾಗಿ ತೊಲಗಿಸಿ ಜನಾಂಗಗಳಲ್ಲಿ, ಅನ್ಯದೇಶಗಳೊಳಗೆ ಚದುರಿಸಿದರೂ ಅವರು ಸೇರಿರುವ ದೇಶಗಳಲ್ಲಿಯೇ ಕೊಂಚಕಾಲದ ಮಟ್ಟಿಗೆ ನಾನೇ ಅವರಿಗೆ ಪವಿತ್ರಾಯಲವಾಗಿರುವೆನು" (ಯೆಹೆಜ್ಕೇಲ 11:16).

ಈ ಕೊನೆಯ ವಾಕ್ಯಗಳ ಸತ್ಯತೆಯನ್ನು ಚರಿತ್ರೆಯು ಪುಷ್ಟಿಕರಿಸುತ್ತದೆ, ಯೆಹೂದ್ಯ ಜನರು ಯಾವಾಗಲೂ ತಮ್ಮ ಹಿಂಸಕನ ಸಮಾಧಿಯ ಪಕ್ಕದಲ್ಲಿ ನಿಂತಿದ್ದುಂಟು. ಸತ್ಯವೇದದ "ಎಸ್ತೇರಳು" ಪುಸ್ತಕದಲ್ಲಿ ಇದಕ್ಕೊಂದು ಒಳ್ಳೆಯ ಉದಾಹರಣೆಯಿದೆ- ಇಲ್ಲಿ ಪರ್ಶಿಯಾ ದೇಶದಲ್ಲಿ ನೆಲೆಸಿದ್ದ ಮೊರ್ದೆಕೈ ಮತ್ತಿತರ ಯೆಹೂದ್ಯರನ್ನು ನಿರ್ಮೂಲನಗೊಳಿಸಲು



ಪಣತೊಟ್ಟಿದ್ದ ಹಾಮಾನನೆಂಬ ಮನುಷ್ಯನ ಬಗ್ಗೆ ಓದುತ್ತೇವೆ. ತನ್ನ ಯೋಜನೆಯನ್ನು ಹೆಂಡತಿಗೂ, ಸ್ನೇಹಿತರಿಗೂ ಹೇಳಿದಾಗ, ಅವರೆಲ್ಲಾ ಹಾಮಾನನ್ನು ಹೀಗೆಂದು ಎಚ್ಚರಿಸುತ್ತಾರೆ- "ಯಾವನ ಮುಂದೆ ನಿನ್ನ ಪತನವು ಪ್ರಂಭವಾಯಿತೋ, ಆ ಮನುಷ್ಯನು ಯೆಹೂದ್ಯ ಸಂತಾನದವನಾಗಿದ್ದರೆ ನೀನು ಗೆಲ್ಲಲಾರಿ, ಅವನ ಮುಂದೆ ಬಿದ್ದು ಹಾಳಾಗಿವಿ" (ಎಸ್ತೇರಳು 6:13). ಇದಾದ ಸ್ವಲ್ಪ ಸಮಯದಲ್ಲೇ ಹಾಮಾನನು ಮೊರ್ದೆಕೈಗೆಂದು ತಾನು ಸಿದ್ಧಪಡಿಸಿದ್ದ ಗಲ್ಲುಗಂಬದಲ್ಲಿ ತಾನೇ ನೇಣುಹಾಕಲ್ಪಟ್ಟನು.

ಯೆಹೂದ್ಯರು ತಮ್ಮ ಮೇಲೆ ಶತಶತಮಾನಗಳಿಂದ ನಡೆದ ದೌರ್ಜನ್ಯದ ನಡುವೆಯೂ ಬದುಕಿ ಬೆಳೆದಿದ್ದಾರೆ. ಇದಕ್ಕೆ ಕಾರಣವು ವಾಶಿಂಗ್ಟನ್ನಿನಲ್ಲಿರುವ "ಸಂಯುಕ್ತ ರಾಷ್ಟ್ರಗಳ ಹತ್ಯಾಕಾಂಡ ಸ್ಮಾರಕ ಮ್ಯೂಜಿಯಂ"ದ ದ್ವಾರದ ಬಳಿ ದೊಡ್ಡ ಅಕ್ಷರಗಳಲ್ಲಿ ಆಕಸ್ಮಿಕವೋ ಎಂಬಂತೆ ಬರೆಯಲ್ಪಟ್ಟಿದೆ- **"ನೀವು ನನ್ನ ಸಾಕ್ಷಿ - ಯಶಾಯ 43:10"**. ಇಸ್ರಾಯೇಲ್ ದೇಶದ ಇತಿಹಾಸವು ಈ ಮಾತಿಗೆ ಸಾಕ್ಷಿ ಮಾತ್ರವಲ್ಲ ದೇವರ ಈ ವಾಕ್ಯಕ್ಕೂ ಸಮರ್ಥನೆ ನೀಡುತ್ತದೆ. "ಯೆಹೋವನು ಇಂತೆನ್ನುತ್ತಾನೆ- ನಾನು ನಿನ್ನನ್ನು ರಕ್ಷಿಸಲು ನಿನ್ನೊಂದಿಗಿದ್ದೇನೆ; ನಾನು ಯಾವ ಜನಾಂಗಗಳಲ್ಲಿಗೆ ನಿನ್ನನ್ನು ಅಟ್ಟಿ ಚದುರಿಸಿದೆನೋ ಆ ಜನಾಂಗಗಳನ್ನೆಲ್ಲಾ ನಿರ್ಮೂಲ ಮಾಡುವೆನು, ನಿನ್ನನ್ನೋ ನಿರ್ಮೂಲ ಮಾಡೆನು; ನಿನ್ನನ್ನು ಮಿತಿಮೀರಿ ಶಿಕ್ಷಿಸೆನು, ಆದರೆ ಶಿಕ್ಷಿಸದೆ ಬಿಡುವುದಿಲ್ಲ" (ಯೆರೆಮೀಯ 30:11).




The Holocaust Museum in Washington DC; where the following words are inscribed from the prophet Isaiah, "You Are My Witnesses."

ಇಸ್ರಾಯೇಲ್ ದೇಶದ ಇಂದಿನ ಅಸ್ಥಿತ್ವವು ದೇವರಿದ್ದಾನೆ ಮತ್ತು ದೇವರಿಗೆ ಈ ಭೂಮಿಯ ವಿಷಯದಲ್ಲಿ ಒಂದು ಉದ್ದೇಶವಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ದೇವರೊಬ್ಬನೇ ಹೀಗೆ ಘೋಷಿಸಲು ಸಾಧ್ಯ- "ನಾನೇ ದೇವರು, ಇನ್ನು ಯಾರೂ ಅಲ್ಲ; ನಾನೇ ಪರಮದೇವರು, ನನಗೆ ಸರಿಸಮಾನರಿಲ್ಲ. ಆರಂಭದಲ್ಲಿಯೇ ಅಂತ್ಯವನ್ನು ತಿಳಿಸಿದ್ದೇನೆ; ಇನ್ನೂ ನಡೆಯದಿರುವ ಕಾರ್ಯಗಳನ್ನು ಪುರಾತನ ಕಾಲದಲ್ಲಿಯೇ ಅರುಹಿದ್ದೇನೆ" (ಯೆಶಾಯ 46:9-10).

ಸತ್ಯವೇದವು ಒಂದು ವಿಶಿಷ್ಠವಾದ ಪುಸ್ತಕ, ಏಕಂದರೆ ಅದು ಇತಿಹಾಸದ ಹಾದಿಯನ್ನು ಚಿತ್ರಿಸುತ್ತದೆ. ಏಕಂದರೆ **"ಮನುಷ್ಯರ ರಾಜ್ಯದಲ್ಲಿ ದೇವರು ಆಳುತ್ತಾನೆ"** ಇದರ ಫಲಿತಾಂಶದ ಬಗ್ಗೆ ನಮಗೆ ಭರವಸೆಯಿದೆ. ಈ ಪ್ರಪಂಚವು ಕನಸುಗಳನ್ನೂ, ದರ್ಶನಗಳನ್ನೂ ಕಾಣುವವರಿಂದ

ತುಂಬಿದೆ. ಈ ಕನಸುಗಳಲ್ಲಿ ಕೆಲವುಗಳಿಗೆ ಮಾತ್ರ ಸತ್ವವಿದೆ, ದೇವರು ಮಾತ್ರವೇ ಈ ದರ್ಶನಗಳನ್ನು ವಿಶಧೀಕರಿಸಿ, ಅವುಗಳ ಸಾಧನೆಗೆ ಬೇಕಾದ ನಿಂಬಂಧನೆಗಳನ್ನು ಅಳವಡಿಸಿ, ಅವುಗಳ ಪೂರ್ಣತೆಗಾಗಿ ಇತಿಹಾಸ ಹಿಡಿಯಬೇಕಾದ ದಾರಿಯನ್ನು ಗೊತ್ತುಮಾಡುತ್ತಾನೆ.
ಇವುಗಳ ಬಗ್ಗೆ ಯೋಚಿಸಿ :–

**ದೇವರ ಉದ್ದೇಶದ ಪರಿಭಾಷೆ :** ದೇವರಿಗೆ ಪ್ರಪಂಚದ ವಿಷಯದಲ್ಲಿ ಒಂದು ಉದ್ದೇಶವಿದೆ– “ನನ್ನ ಜೀವದಾಣೆ, ಯೆಹೋವನ ಮಹಿಮೆಯು ಭೂಲೋಕದಲ್ಲೆಲ್ಲಾ ತುಂಬಿರಬೇಕೆಂಬುದು ನಿಶ್ಚಯ ವಾಕ್ಯ” (ಅರಣ್ಯ 14:21), “ಶಾಂತರು ಧನ್ಯರು; ಅವರು ಭೂಮಿಗೆ ಬಾಧ್ಯಸ್ಥರಾಗುವರು” (ಮತ್ತಾಯ 5:5).

**ಸಂಪೂರ್ಣತೆಗೆ ದೇವರು ನಿಶ್ಚಯಿಸಿರುವ ನಿಂಬಂಧನೆಗಳು :** ತಮ್ಮ ಉದ್ದೇಶ ಪೂರ್ಣತೆಗಾಗಿ ದೇವರು ಪ್ರಾಪಂಚಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುತ್ತಾನೆ– “ಯಾಕಂದರೆ ಆತನು ನಿಷ್ಕರ್ಷೆ ಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯ ವಿಚಾರಣೆ ಮಾಡುವುದಕ್ಕೆ ಒಂದು ದಿವಸವನ್ನು ಗೊತ್ತು ಮಾಡಿದ್ದಾನೆ. ಅವನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ಇದನ್ನು ನಂಬುವುದಕ್ಕೆ ಎಲ್ಲರಿಗೂ ಆಧಾರ ಕೊಟ್ಟಿದ್ದಾನೆ” (ಅ.ಕೃ. 17:31), “ರಾತ್ರಿಯಲ್ಲಿ ನಿನ್ನನ್ನು ಮನಃಪೂರ್ವಕವಾಗಿ ಹಾರೈಸಿದ್ದೇವೆ, ಹೌದು ನಮ್ಮ ಆತ್ಮದಲ್ಲಿ ನಿನ್ನನ್ನು ತವಕದಿಂದ ಹುಡುಕಿದಿದ್ದೇವೆ. ನೀನು ಲೋಕದಲ್ಲಿ ನ್ಯಾಯ ಕಾರ್ಯಗಳನ್ನು ನಡೆಸುವಾಗ ಭೂನಿವಾಸಿಗಳು ಧರ್ಮಜ್ಞಾನವನ್ನು ಪಡೆದುಕೊಳ್ಳುವರು” (ಯೆಶಾಯ 29:9).

**ದೇವರು ತನ್ನ ಉದ್ದೇಶ ನೆರವೇರದೆ ಹೋಗಬಾರದು ಎಂಬುದಕ್ಕಾಗಿ ಇತಿಹಾಸದ ಹಿಡಿಯುಬೇಕಾದ ಮಾರ್ಗವನ್ನು ಯೋಜಿಸುತ್ತಾನೆ ಮತ್ತು ಜನಾಂಗಗಳ ಭಾಗ್ಯವಿಧಾತನಾಗಿದ್ದಾನೆ :** “ಇದು ಅನಿಮಿಷರ ತೀರ್ಮಾನ, ದೇವರ ತೀರ್ಪು; ಪರಾತ್ಪರನು ಮನುಷ್ಯರ ರಾಜ್ಯದಲ್ಲಿ ರಾಜನಾಗಿ ಅದರ ಆಳ್ವಿಕೆಯನ್ನು ತನಗೆ ಬೇಕಾದವರಿಗೆ ಒಪ್ಪಿಸಿ, ಕನಿಷ್ಠರನ್ನೂ ಅದರ ಮೇಲೆ ನೇಮಿಸುತ್ತಾನೆಂಬುದು ಜೀವಂತರಿಗೆ ತಿಳಿದುಬರಬೇಕೆಂಬುದೇ ಈ ತೀರ್ಮಾನವಾಯಿತು” (ದಾನಿಯೇಲ 4:17).

**ಪರಿಣಾಮದ ಬಗ್ಗೆ ದೇವರು ಆಶ್ವಾಸನೆಯಿತ್ತಿದ್ದಾನೆ– ಮನುಷ್ಯರ ವ್ಯವಹಾರಗಳಲ್ಲಿ ದೇವರ ಹಸ್ತಕ್ಷೇಪದ ಫಲವಾಗಿ ಮುಂದೊಂದು ದಿನ ಈ ವಿಶ್ರಾಂತ ಪ್ರಪಂಚದಲ್ಲಿ ಶಾಂತಿ ಸ್ಥಾಪನೆಯಾಗಲಿದೆ :–** “ನ್ಯಾಯವು ಅಡವಿಯಲ್ಲಿಯೂ ನೆಲೆಗೊಳ್ಳುವುದು, ಧರ್ಮವು ತೋಟದಲ್ಲಿ ಇದ್ದೇ ಇರುವುದು, ಧರ್ಮದಿಂದ ಸಮಾಧಾನವು ಫಲಿಸುವುದು; ಶಾಂತಿ, ನಿರ್ಭಯಗಳು ಧರ್ಮದ ನಿತ್ಯ ಪರಿಣಾಮವಾಗಿರುವವು” (ಯೆಶಾಯ 32:16–17). “ಅಂತ್ಯಕಾಲದಲ್ಲಿ ಯೆಹೋವನ ಮಂದಿರದ ಬೆಟ್ಟವು, ಗುಡ್ಡಬೆಟ್ಟಗಳಿಗಿಂತ ಉನ್ನತೋನ್ನತವಾಗಿ ಬೆಳೆದು ನೆಲೆಗೊಳ್ಳುವುದು; ಆಗ ಸಕಲ ದೇಶಗಳವರು ಅದರ ಕಡೆಗೆ ಪ್ರವಾಗಳಂತೆ ಬರುವರು; ಹೊರಟುಬಂದ ಬಹುಜನಾಂಗದವರು– ಬನ್ನಿರಿ ಯೆಹೋವನ ಪರ್ವತಕ್ಕೆ, ಯಾಕೋಬ್ಯರ ದೇವರ ಮಂದಿರಕ್ಕೆ ಹೋಗೋಣ, ಆತನು ತನ್ನ ಮಾರ್ಗಗಳ ವಿಷಯವಾಗಿ ನಮಗೆ ಬೋಧನೆ ಮಾಡುವನು, ನಾವು ಆತನ ದಾರಿಗಳಲ್ಲಿ ನಡೆಯುವೆವು. ಏಕಂದರೆ ಚೀಯೋನಿಂದ ಧರ್ಮೋಪದೇಶವೂ, ಯೆರೂಸಲೇಮಿನಿಂದ ಯೆಹೋವನ ವಾಕ್ಯವೂ ಹೊರಡುವವು. ಆತನು ದೇಶದೇಶಗಳ ವ್ಯಾಜ್ಯಗಳನ್ನು ವಿಚಾರಿಸುವನು, ಬಹುರಾಷ್ಟ್ರಗಳವರಿಗೆ




ನ್ಯಾಯ ತೀರಿಸುವನು; ಅವರೋ ತಮ್ಮ ಆಯುಧಗಳನ್ನು ಕುಲುಮೆಗೆ ಹಾಕಿ ಕತ್ತಿಗಳನ್ನು ಗುಳಗಳನ್ನಾಗಿಯೂ, ಭರ್ಜಿಗಳನ್ನು ಕುಡುಗೋಲುಗಳನ್ನಾಗಿಯೂ ಮಾಡುವರು; ಜನಾಂಗವು ಜನಾಂಗಕ್ಕೆ ವಿರುದ್ಧವಾಗಿ ಕತ್ತಿಯನ್ನೆತ್ತದು, ಇನ್ನು ಯುದ್ಧಭ್ಯಾಸವು ನಡೆಯುವುದೇ ಇಲ್ಲ” (ಯೆಶಾಯ 2:2–4).

## ಇಸ್ರಾಯೇಲ್ ದೇಶದ ವಿಶಿಷ್ಟತೆ :–

ಯೆಹೂದ್ಯ ಜನರು ತಾವು ಇಷ್ಟುಕಾಲ ಬದುಕಿ ಉಳಿದುಕೊಂಡಿರುವುದು ತಮ್ಮ ಸೈನ್ಯ ಬಲದಿಂದ ಮತ್ತು ಸಹಜ ಸಾಮರ್ಥ್ಯದಿಂದ ಎಂದುಕೊಂಡಿರಬಹುದಾದರೂ, ಸತ್ಯಸಂಗತಿಯು ಹಾಗಿಲ್ಲ. ಅವರು ಉಳಿದಿರುವುದು ದೇವರು ಹಾಗೆ ಅಪ್ಪಣೆ ಕೊಡಿಸಿರುವುದರಿಂದ, ಇಸ್ರಾಯೇಲ್ ದೇಶವು ದೇವರ ಉದ್ದೇಶದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಒಂದು ಸಂದರ್ಭದಲ್ಲಿ ದೇವರು ಅವರಿಗೆ ಹೀಗೆ ತಿಳಿಸಿದ್ದಾನೆ– “ಭೂಮಿಯ ಸಕಲ ಕುಲಗಳೊಳಗೆ ನಿಮ್ಮನ್ನು ಮಾತ್ರ ನನ್ನವರೆಂದು ಅರಿತುಕೊಂಡಿದ್ದೇನೆ” (ಆಮೋಸ 3:2). ಮತ್ತೊಂದು ಕಡೆ ಅವರಿಗೆ ಹೀಗೆ ಜ್ಞಾಪಕ ಪಡಿಸಿದ್ದಾನೆ– “ಯಾಕಂದರೆ ನೀವು ನಿಮ್ಮ ದೇವರಾದ **ಯೆಹೋವನಿಗೆ ಮೀಸಲಾದ** ಜನರಾಗಿದ್ದೀರಲ್ಲವೇ; ಆತನು ಭೂಲೋಕದಲ್ಲಿನ ಸಮಸ್ತ ಜನಾಂಗಗಳಲ್ಲಿ ನಿಮ್ಮನ್ನೇ ಸ್ವಕೀಯ ಜನರಾಗುವುದಕ್ಕೆ ಆದುಕೊಂಡನು” (ಧರ್ಮೋಪದೇಶಕಾಂಡ 7:6). ಆದರೆ ಈ ಬಾಂಧವ್ಯವು ಇಸ್ರಾಯೇಲ್ಯರ ಯಾವುದೇ ಗುಣಾತಿಶಯಗಳ ಫಲವಾಗಿ ಬಂದದ್ದಲ್ಲ, ಇದು ದೇವರು ತನ್ನ ಉದ್ದೇಶ ಪರಿಪೂರ್ಣತೆಗಾಗಿ ಅವರನ್ನು ವಾಹಕವನ್ನಾಗಿ ಮಾಡಿಕೊಂಡಿದ್ದರಿಂದ ದೊರಕಿದ ಕೃಪೆ. ಯೆಹೂದ್ಯರ ಮೂಲಕ ಇಡೀ ಪ್ರಪಂಚದಲ್ಲಿ ಧರ್ಮ ಮತ್ತು ಶಾಂತಿಯನ್ನು ನೆಲೆಗೊಳಿಸುವುದು ದೇವರ ಉದ್ದೇಶ. ಈ ಕಾರಣಕ್ಕಾಗಿಯೇ ಇಸ್ರಾಯೇಲ್ಯರಿಗೆ ಹೀಗೆಂದನು– “ನಿಮ್ಮನ್ನು ಎಲ್ಲಾ ಜನಾಂಗಾಗಳಲ್ಲಿ ಹೆಚ್ಚುಮಂದಿ ಎಂದು ಇಷ್ಟಪಟ್ಟು ಆದುಕೊಳ್ಳಲಿಲ್ಲ; ನೀವು ಎಲ್ಲಾ ಜನಾಂಗಗಳಿಗಿಂತಲೂ **ಕಡಿಮೆ ಮಂದಿಯಷ್ಟೆ.** ಯೆಹೋವನು ನಿಮ್ಮನ್ನು ಪ್ರೀತಿಸಿ ತಾನು ನಿಮ್ಮ ಪಿತೃಗಳಿಗೆ ಮಾಡಿದ ಪ್ರಮಾಣವನ್ನು ನೆರವೇರಿಸಬೇಕೆಂದು ಐಗುಪ್ತರ ಅರಸನಾದ ಫರೋಹನ ಕೆಳಗೆ ದಾಸರಾಗಿದ್ದ ನಿಮ್ಮನ್ನು ಬಿಡುಗಡೆ ಮಾಡಿ ತನ್ನ ಭುಜಬಲವನ್ನು ಪ್ರಯೋಗಿಸಿ ಆ ದೇಶದೊಳಗಿಂದ ಬರಮಾಡಿದನು” (ಧ.ಕಾ. 7:7–8). ಮೇಲೆ ಹೇಳಿದ ಪ್ರಮಾಣವು ಆದಿಕಾಂಡ 22:18ರಲ್ಲಿ ದೇವರು ಅಬ್ರಹಾಮನಿಗೆ ಮಾಡಿದ್ದಾಗಿದ್ದು ಅದು ಹೀಗಿದೆ– “ನೀನು ನನ್ನ ಮಾತನ್ನು ಕೇಳಿದ್ದರಿಂದ ಭೂಮಿಯ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ ಆಶೀರ್ವಾದ ಉಂಟಾಗುವುದು”.



ಹೀಗೆ ಇಸ್ರಾಯೇಲ್ ದೇವರ ಉದ್ದೇಶದ ಕೇಂದ್ರದಲ್ಲಿದೆ ಮತ್ತು ಇದೇ ಕಾರಣಕ್ಕಾಗಿ **ಯೇಸುಕ್ರಿಸ್ತನು** ಸಮಾರ್ಯದ ಹೆಂಗಸಿಗೆ ''**ಬರಬೇಕಾದ ರಕ್ಷಣೆ ಯೆಹೂದ್ಯರೊಳಗಿಂದ ಬರುತ್ತದೆ**'' ಎಂದನು(ಯೋಹಾನ 4:22). ಆದರೆ ಯೆಹೂದ್ಯರು ತಮ್ಮ ಈ ಉನ್ನತ ಸೌಭಾಗ್ಯಕ್ಕೆ ಯಾವ ಮೌಲ್ಯವನ್ನೂ ಕೊಡಲಿಲ್ಲ. ಭೂಮಿಯ ಮೇಲೆ ಶಾಂತಿಯನ್ನೂ, ಮನುಷ್ಯರಲ್ಲಿ ಸದ್ಭಾವನೆಯನ್ನೂ ಸ್ಥಾಪಿಸುವ ಕಾರ್ಯದಲ್ಲಿ ತಮ್ಮ ಪಾತ್ರವನ್ನು ಅವರು ಅರ್ಥಮಾಡಿಕೊಳ್ಳದ ಕಾರಣ, ಮೆಸ್ಸೀಯನಾದ ಯೇಸುಕ್ರಿಸ್ತನನ್ನು ತಿರಸ್ಕರಿಸಿದರು ಮತ್ತು ದೇವರ ಕೋಪಾಗ್ನಿಯನ್ನು ತಮ್ಮ ಮೇಲೆ ಬರಮಾಡಿಕೊಂಡರು. ಪ್ರಪಂಚದಾದ್ಯಂತ ಎಲ್ಲಾ




ದೇಶಗಳಲ್ಲಿ ಯೆಹೂದ್ಯರು ಆಶ್ರಯಾರ್ಥಿಗಳಾಗಲು, ಯೇಸುಕ್ರಿಸ್ತನನ್ನು ತಿರಸ್ಕರಿಸಿದ್ದೇ ನೇರ ಕಾರಣ. ಏಕಂದರೆ ಯೇಸುಕ್ರಿಸ್ತನ ವಿಚಾರಣೆಯ ಸಮಯದಲ್ಲಿ ಯೆಹೂದ್ಯ ಮುಖಂಡರುಗಳು ಹೀಗೆ ವಚನವಿತ್ತರು– ''ಆತನನ್ನು ಕೊಲ್ಲಿಸಿದ್ದಕ್ಕೆ(ರಕ್ತಕ್ಕೆ) ನಾವೂ, ನಮ್ಮ ಮಕ್ಕಳೂ ಉತ್ತರ ಕೊಡುತ್ತೇವೆ'' (ಮತ್ತಾಯ 27:25). ಈ ಕಾರಣದಿಂದಲೇ ಯೇಸುಕ್ರಿಸ್ತನು ಹೀಗೆಂದನು– ''ನೋಡಿರಿ, ನಿಮ್ಮ ಆಲಯವು ನಿಮಗೆ ಬರಿದಾಯಿತು'' (ಮತ್ತಾಯ 23:38). ಇನ್ನೊಂದು ಕಡೆ– ''ಯಾಕೆಂದರೆ ಬರೆದಿರುವುದೆಲ್ಲಾ ನೆರವೇರುವುದಕ್ಕಾಗಿ ಅವು ದಂಡನೆಯ ದಿವಸಗಳಾಗಿವೆ. ಆ ದಿನಗಳಲ್ಲಿ ಬಸುರಿಯರಿಗೂ, ಮೊಲೆಕೂಸಿರುವ ಹೆಂಗಸರಿಗೂ ಆಗುವ ಕಷ್ಟವನ್ನು ಏನು ಹೇಳಲಿ! ಈ ಸೀಮೆಯ ಮೇಲೆ ಮಹಾವಿಪತ್ತು, ಈ ಜನರಿಗೆ ಉಗ್ರದಂಡನೆಯೂ ಆಗುವುವು.



ಅವರು ಕತ್ತಿಯ ಬಾಯಿಗೆ ಬೀಳುವರು, ಅವರನ್ನು ಅನ್ಯದೇಶಗಳಿಗೆಲ್ಲಾ ಸೆರೆಹಿಡಿದುಕೊಂಡು ಹೋಗುವರು; ಅನ್ಯ ದೇಶಗಳವರ ಸಮಯಗಳು ಪೂರೈಸುವ ತನಕ ಯೆರೂಸಲೇಮ್ ಪಟ್ಟಣವು ಅನ್ಯದೇಶದವರಿಂದ ತುಳಿದಾಡಲ್ಪಡುವುದು'' (ಲೂಕ 21:23–24).

ಸತ್ಯವೇದದ ಗ್ರಂಥದ ಪುಟಗಳಲ್ಲಿ ಕಳೆದ 4000 ವರ್ಷಗಳ ಇಸ್ರಾಯೇಲ್ ದೇಶದ ಚರಿತ್ರೆಯನ್ನು ದೇವರು ಚಿತ್ರಿಸಿದ್ದಾನೆ. ತನ್ನ ಉದ್ದೇಶ ಸಾಧನೆಗಾಗಿ ಇಸ್ರಾಯೇಲ್ಯರು ನಡೆದ ಪ್ರತಿಯೊಂದು ಹೆಜ್ಜೆ, ಹಾದಿಯನ್ನು ದೇವರೇ ನಿರ್ದೇಶಿಸಿದ್ದಾನೆ.

1) ಇಸ್ರಾಯೇಲ್ಯರು ಐಗುಪ್ತದ ದಾಸ್ಯದಿಂದ ವಿಮೋಚನೆ ಹೊಂದುವ ವಿಷಯವನ್ನು ಈ ಘಟನೆ ನಡೆಯುವ ಸುಮಾರು 600 ವರ್ಷಗಳಷ್ಟು ಮೊದಲೇ ದೇವರು ಮುಂತಿಳಿಸಿದ್ದನು (ಆದಿಕಾಂಡ 15:13–16).

2) ಇಸ್ರಾಯೇಲ್ ದೇಶದ ಅನುಭವಗಳನ್ನು ನೂರಾರು ವರ್ಷಗಳಷ್ಟು ಮುಂಚೆ ದೇವರು ವಿವರವಾಗಿ ಹೇಳಿದ್ದಾನೆ–(ಧ.ಕಾ. 28:15–48).

3) ಕ್ರಿ.ಶ. 70ರಲ್ಲಿ ನಡೆದ ಯೆರೂಸಲೇಮ್ ಪಟ್ಟಣದ ನಾಶ ಮತ್ತು ಯೆಹೂದ್ಯರು ಸುತ್ತಲಿನ ದೇಶಗಳಲ್ಲಿ ಚದುರಿ ಹೋಗುವುದನ್ನು ಕುರಿತ ಪ್ರವಾದನೆಗಳು 1500 ವರ್ಷಗಳಷ್ಟು ಹಿಂದೆಯೇ ತಿಳಿಸಲ್ಪಟ್ಟಿದ್ದವು (ಧ.ಕಾ. 28:49–65 ಮತ್ತು ಲೂಕ 21:24).

4) ತಮ್ಮ ಪ್ರಾಚೀನ ಸ್ವದೇಶದಲ್ಲಿ ಯೆಹೂದ್ಯರ ಪುನಃಸ್ಥಾಪನೆಯು ದೇವರ ಪ್ರವಾದಿಗಳಿಂದ ಮುಂತಿಳಿಸಲ್ಪಟ್ಟಿತ್ತು (ಯೆಶಾಯ 11:2, 27:13, ಯೆರೆಮೀಯ 31:38, ಮತ್ತು ಚೆಫನ್ಯ 3:18–19).

5) ಯೇಸುಕ್ರಿಸ್ತನು ಹಿಂದಿರುಗುವ ವೇಳೆಗೆ ಇಸ್ರಾಯೇಲ್ ದೇಶವು ಪುನಃ ಸ್ಥಾಪಿತವಾದ ದೇವರ ರಾಜ್ಯದ ಕೇಂದ್ರಬಿಂದು ಆಗಿರುತ್ತದೆ (ಯೆಶಾಯ 2:2–4, 61:4–6, ಯೆರೆ 3:17–18, ಜೆಕರ್ಯ 2:10–11).

## ಭವಿಷ್ಯದಲ್ಲಿ ಇಸ್ರಾಯೇಲ್‌ನ ಪುನಃಸ್ಥಾಪನೆ

ಪುರಾತನ ಇಸ್ರಾಯೇಲ್ ದೇಶವು ದೇವರ ರಾಜ್ಯವಾಗಿದ್ದು, ಯಾಜಕರ ರಾಜ್ಯವೆಂದೂ ಪವಿತ್ರ ದೇಶವೆಂದೂ ವರ್ಣಿಸಲ್ಪಟ್ಟಿತ್ತು(ಅರಣ್ಯ 19:6). ಆ ದಿನಗಳಲ್ಲಿ ದೇವರೇ ಅದರ ಅರಸನಾಗಿದ್ದನು(ನ್ಯಾಯಸ್ಥಾಪಕರು 8:23), ನಂತರದ ದಿನಗಳಲ್ಲಿ ಅರಸರು ನೇಮಿಸಲ್ಪಟ್ಟಿದ್ದು ಅವರನ್ನು ''**ದೇವರ ಸಿಂಹಾಸನದಲ್ಲಿ ಕುಳಿತವರು**'' ಎಂದು ಕರೆಯುತ್ತಿದ್ದರು (1ಪೂ.ಕಾ.28:5 ಮತ್ತು 29:23). ದೇವರಿಗೆ ಸಲ್ಲಬೇಕಾದ ಮಹಿಮೆಯನ್ನು ಸಲ್ಲಿಸದೇ ಹೋದ ಕಾರಣ ಇಸ್ರಾಯೇಲ್ಯರು ನ್ಯಾಯತೀರ್ಪಿಗೆ ಗುರಿಯಾದರು. ಬಾಬೆಲಿನವರು ಅವರ ದೇಶವನ್ನು ನಾಶಪಡಿಸಿದರು– ''ಕರ್ತನಾದ ಯೆಹೋವನು ಇಂತೆನ್ನುತ್ತಾನೆ–ಮುಂಡಾಸವನ್ನು ಕಿತ್ತುಬಿಡು, ಕಿರೀಟವನ್ನು ಎತ್ತಿಹಾಕು! ಎಲ್ಲವೂ ವ್ಯತ್ಯಸ್ತವಾಗಲಿ; ಕೆಳಗಿನದನ್ನು ಮೇಲೆ ಮಾಡು, ಮೇಲಿನದನ್ನು ಕೆಳಗೆ ಮಾಡು; ನಾನು ದೊಬ್ಬಿಬಿಡುವೆನು, ದೊಬ್ಬಿಬಿಡುವೆನು, ದೊಬ್ಬಿಬಿಡುವೆನು;(ರಾಜ್ಯಕ್ಕೆ) ಬಾಧ್ಯನು ಬರುವುದರೊಳಗೆ ಒಂದೂ ಇದ್ದಂತಿರದು; ಅವನಿಗೇ ರಾಜ್ಯವನ್ನು ವಹಿಸುವೆನು'' (ಯೆಹೆಜ್ಕೇಲ 21:26–17). ದೇವರ ಇತರ ನ್ಯಾಯ ತೀರ್ಪುಗಳಲ್ಲಿನ ಹಾಗೆ, ಇಲ್ಲಿಯೂ ಒಂದು ಆಶಾಕಿರಣವಿದೆ, ದೇವರು ಯೆಹೂದ್ಯರನ್ನು ದೊಬ್ಬಿಬಿಡುವುದು, ಸಿಂಹಾಸನಕ್ಕೆ ದೇಶವನ್ನು ಧರ್ಮದಿಂದ ಆಳುವ ಇನ್ನೊಬ್ಬ ಉತ್ತರಾಧಿಕಾರಿಯನ್ನು ''**ಎಬ್ಬಿಸುವವರೆಗೆ**'' ಮಾತ್ರ

(2ಸಮುವೇಲ23:3).

ಆ ಉತ್ತರಾಧಿಕಾರಿ ಯೇಸುಕ್ರಿಸ್ತನೇ ಮತ್ತು ದೇವದೂತನು ಅವನ ತಾಯಿ ಮರಿಯಳಿಗೆ ತಿಳಿಸಿದಂತೆ– ‘‘ಇಗೋ, ನೀನು ಗರ್ಬಿಣಿಯಾಗಿ ಒಬ್ಬ ಮಗನನ್ನು ಹೆರುವಿ; ಆತನಿಗೆ ಯೇಸುವೆಂದು ಹೆಸರಿಡಬೇಕು, ಆತನು ಮಹಾಪುರುಷನಾಗಿ ಪರಾತ್ಪರನ ಕುಮಾರನೆನಿಸಿಕೊಳ್ಳುವನು; ಇದಲ್ಲದೆ ದೇವರಾಗಿರುವ ಕರ್ತನು ಆತನ ಮೂಲಪಿತನಾದ ದಾವೀದನ ಸಿಂಹಾಸನವನ್ನು ಆತನಿಗೆ ಕೊಡುವನು’’ (ಲೂಕ 1:31–33). ಯೇಸುಕ್ರಿಸ್ತನು ಹುಟ್ಟಿದ್ದು ಇಸ್ರಾಯೇಲಿನ ಅರಸನಾಗಲು, ಅವನನ್ನು ಶಿಲುಬೆಗೆ ಜಡಿದಾಗ, ಶಿಲುಬೆಯ ಮೇಲ್ಭಾಗದಲ್ಲಿ ಹೀಗೆಂದೆ ಬರೆಯಲ್ಪಟ್ಟಿತ್ತು– ‘‘**ಇವನು ಯೇಸು, ಯೆಹೂದ್ಯರ ಅರಸನು**’’ (ಮತ್ತಾಯ 27:37), ಈ ಕಾರ್ಯವನ್ನು ದೇವರು ಇನ್ನೂ ನೆರವೇರಿಸಿಲ್ಲ.

ಪುನರುತ್ಥಾನದ ಬಳಿಕ ಶಿಷ್ಯರು ಯೇಸುಕ್ರಿಸ್ತನನ್ನು ಹೀಗೆ ಕೇಳಿದರು– ‘‘ಸ್ವಾಮೀ, ನೀನು ಇದೇಕಾಲದಲ್ಲಿ ಇಸ್ರಾಯೇಲ್ ಜನರಿಗೆ ರಾಜ್ಯವನ್ನು ತಿರುಗಿ ಸ್ಥಾಪಿಸಿ ಕೊಡುವಿಯೋ?’’ (ಅ.ಕೃ. 1:6). ಆದರೆ ಈ ಕೆಲಸಕ್ಕೆ ಹತ್ತಿರಹತ್ತಿರ 2000 ವರ್ಷಗಳು ಕಾಯಬೇಕಾಯಿತು. ಆ ಕಾಲದಲ್ಲಿ ಇಸ್ರಾಯೇಲ್ಯರು ಪ್ರಪಂಚದ ಎಲ್ಲಾ ದೇಶಗಳಿಗೆ ಚದರಿಹೋದರು. ಆದರೆ ದೇವರ ವಾಕ್ಯವು ಸತ್ಯವಾದದ್ದು ಮತ್ತು ಪ್ರವಾದಿಗಳೂ ಸಹ ಪ್ರವಾದನೆ ನುಡಿದಿದ್ದಾರೆ– ‘‘ಯೆಹೋವನು ಇಂದಿನಿಂದ ಎಂದೆಂದಿಗೂ ಅವರ ರಾಜನಾಗಿರುವನು .......... ನಿನ್ನ ಹಿಂದಿನ ಆಡಳಿತವು ನಿನಗೆ ದೊರೆಯುವುದು. ಯೆರೂಸಲೇಮ್ ಪುರಿಯ ರಾಜ್ಯಾಧಿಕಾರವು ನಿನಗೆ ಲಭಿಸುವುದು’’ (ಮೀಕ 4:7–8). ಯೆರೆಮೀಯ ಪ್ರವಾದಿಯೂ ಈ ಕಾಲದ ಬಗ್ಗೆ ಹೇಳುತ್ತಾನೆ –‘‘ಇದು ಯೆಹೋವನ ನುಡಿ–ಒಂದು ಪಟ್ಟಣಕ್ಕೆ ಒಬ್ಬನಂತೆಯೂ, ಗೋತ್ರಕ್ಕೆ ಇಬ್ಬರಂತೆಯೂ ಆರಿಸಿ ಚೀಯೋನಿಗೆ ಕರೆತರುವೆನು ........ ಆ ಕಾಲದಲ್ಲಿ ಯೆರೂಸಲೇಮನ್ನು ಯೆಹೋವನ ಸಿಂಹಾಸನವೆಂದು ಕರೆಯುವರು’’ (ಯೆರೆ 3:14–17). ಯೆಹೆಜ್ಕೇಲ ಪ್ರವಾದಿಯು ಹೀಗೆನ್ನುತ್ತಾನೆ –‘‘ಕರ್ತನಾದ ಯೆಹೋವನು ಇಂತೆನ್ನುತ್ತಾನೆ–ಇಗೋ, ಇಸ್ರಾಯೇಲ್ಯರು ವಶವಾಗಿರುವ ಜನಾಂಗ ಗಳೊಳಗಿಂದ ನಾನು ಅವರನ್ನು ಉದ್ಧರಿಸಿ ಎಲ್ಲಾ ಕಡೆಯಿಂದಲೂ ಒಟ್ಟುಗೂಡಿಸಿ ಸ್ವದೇಶಕ್ಕೆ ಕರೆತಂದು, ಅಲ್ಲಿ ಇಸ್ರಾಯೇಲಿನ ಪರ್ವತಗಳ ಮೇಲೆ ಒಂದೇ ಜನಾಂಗವನ್ನಾಗಿ ಮಾಡುವೆನು; ಒಬ್ಬನೇ ಅವರೆಲ್ಲರಿಗೂ ರಾಜನಾಗಿರುವನು’’ (ಯೆಹೆ 37:21–22).

ಭವಿಷ್ಯದಲ್ಲಿ ಸ್ಥಾಪಿತವಾಗಲಿರುವ ದೇವರ ರಾಜ್ಯಕ್ಕೆ ಪೂರ್ವರಂಗವಾಗಿ ಇಸ್ರಾಯೇಲ್ ದೇಶದ ಪುನಃಸ್ಥಾಪನೆ ನಡೆದಿದೆ.

## ಇಸ್ರಾಯೇಲ್ ದೇಶಕ್ಕೊಂದು ಹೊಸ ಹೃದಯ :–

ಮೇ 14, 1998 ಇಸ್ರಾಯೇಲ್ ದೇಶವು ಪುನಃಸ್ಥಾಪನೆಯ ಐವತ್ತನೆಯ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವಾಗ ಅವರು ಅನೇಕ ಎಡರುತೊಡರುಗಳನ್ನೆದುರಿಸಿ ಬದುಕಿ ಉಳಿದಿದ್ದರ ಮತ್ತು ಅವರ ಧೈರ್ಯ ಸಾಹಸಗಳ ಗುಣಗಾನ ನಡೆಯುತ್ತಿದೆ. ಆದರೆ ದೇವರನ್ನು ಹೊರತುಪಡಿಸಲಾಗಿದೆ. ಇಂದಿನ ಇಸ್ರಾಯೇಲ್ ದೇಶದ ನೀತಿಯೇನೆಂದರೆ, ಆ ಪ್ರದೇಶದಲ್ಲಿ ಸೇನಾ ಸಾರ್ವಭೌಮತ್ವವನ್ನು ಸಾಧಿಸುವ ಸಲುವಾಗಿ ದೇಶಕ್ಕೆ ಸುಭದ್ರ ಗಡಿಗಳನ್ನು ಸ್ಥಾಪಿಸಿ, ಪೋಶಿಸುವುದು. ಈ ಬಗೆಯ ನೀತಿಯು ದೋಷಪೂರ್ಣವಾಗಿದೆ. ಏಕಂದರೆ ಇದರಲ್ಲಿ ‘‘**ದೇವರ ಹಸ್ತದ**’’ ಮಾರ್ಗದರ್ಶನವನ್ನು ಗಣನೆಗೆ ತೆಗೆದುಕೊಂಡಿಲ್ಲ. ತನ್ನ



ಪಿತೃಗಳ ದೇವರನ್ನು ಬಿಟ್ಟು ಮುನ್ನಡೆ ಸಾಧಿಸುವ ಪ್ರಯತ್ನವನ್ನು ಈ ದೇಶ ಮುಂದುವರೆಸಿದರೆ ದೇವರ ಉದ್ದೇಶವು ನೆರವೇರುವಂತಿಲ್ಲ. ಯೆಹೂದ್ಯರು ತಮ್ಮ ತೋಳ್ಬಲವನ್ನೇ ನಂಬಿ, ಸ್ವಪ್ರತಿಷ್ಠೆ ಮತ್ತು ಅಹಂಕಾರವನ್ನೇ ಮೆರೆದರೆ, ಮಧ್ಯಪೂರ್ವ ರಾಷ್ಟ್ರಗಳಲ್ಲಿ ಶಾಂತಿ ಏರ್ಪಡುವಂತೆ ಮಾಡುವುದು ಸಾಧ್ಯವಿಲ್ಲ.

ದೇವರು ಮತ್ತೊಮ್ಮೆ ಇಸ್ರಾಯೇಲಿಗೆ ಮುಂದೆ ಒದಗಲಿರುವುದನ್ನು ಹೊರಪಡಿಸುತ್ತಾನೆ –‘‘ನನ್ನ ಧರ್ಮೋಪದೇಶವನ್ನು ಅವರ ಅಂತರಂಗದಲ್ಲಿ ಇಡುವೆನು, ಅವರ ಹೃದಯದೊಳಗೆ ಅದನ್ನು ಬರೆಯುವೆನು; ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು’’ (ಯೆರೆ 31:33). ಸತ್ಯವೇದದ ಭವಿಷ್ಯವಾಣಿಯು ಸೂಚಿಸುವ ಪ್ರಕಾರದ ಬದಲಾವಣೆಗಳು ಈಗಾಗಲೇ ಗೋಚರಿಸುತ್ತಿವೆ. ಪ್ರಪಂಚದ ಇತರ ದೇಶಗಳು ಇಸ್ರಾಯೇಲನ್ನು ತಿರಸ್ಕಾರದಿಂದ ಕಾಣಲಾರಂಭಿಸಿದಾಗ, ಅಲ್ಲಿ ತಾತ್ಕಾಲಿಕವಾಗಿ ವಿನಾಶದ ಪರಿಸ್ಥಿತಿ ಏರ್ಪಟ್ಟು ಹೃದಯಗಳ ಪರಿವರ್ತನೆ ಉಂಟಾಗುತ್ತದೆ. ಪ್ರವಾದಿಯ ಮಾತುಗಳನ್ನು ಮತ್ತೊಮ್ಮೆ ಕೇಳಿ– ‘‘ಚೀಯೋನೇ ಯೆಹೋವನು ನೇಮಿಸಿದ ದಿನಗಳು ಬರುತ್ತಿವೆ; ಸೂರೆಯಾದ ನಿನ್ನ ಆಸ್ತಿಯು ಆಗ ನಿನ್ನ ಮಧ್ಯದಲ್ಲಿ ಹಂಚಿಕೆಯಾಗುವುದು. ನಾನು ಸಕಲ ಜನಾಂಗಗಳನ್ನು ಯೆರೂಸಲೇಮಿಗೆ ವಿರುದ್ಧವಾಗಿ ಕೂಡಿಸುವೆನು, ಅವು ಪಟ್ಟಣಗಳನ್ನು ಆಕ್ರಮಿಸಿಕೊಂಡು ಮನೆಗಳನ್ನು ಸೂರೆಮಾಡಿ, ಹೆಂಗಸರನ್ನು ಕೆಡಿಸುವವು, ಪಟ್ಟಣದ ಅರೆವಾಸಿ ಜನರು ಸೆರೆಗೆ ಹೋಗುವರು’’ (ಯೆರೆ14:1–2), ಯೋವೇಲ ಪ್ರವಾದಿಯು ಈ ಸಂಭವದ ಕಾಲವನ್ನು ಗುರುತಿಸುತ್ತಾನೆ– ‘‘ಇಗೋ ಆ ದಿನಗಳಲ್ಲಿ ನಾನು ಯೆಹೂದ ಮತ್ತು ಯೆರೂಸಲೇಮಿನ ದುರವಸ್ಥೆಯನ್ನು ತಪ್ಪಿಸುವ ಕಾಲದಲ್ಲಿ ಸಕಲ ಜನಾಂಗಗಳನ್ನು ಕೂಡಿಸಿ ........ ಅವುಗಳೊಂದಿಗೆ ವಿವಾದ ಮಾಡುವೆನು’’ (ಯೋವೇಲ3:12). ಇದೆಲ್ಲಾ ಆಗುವುದು ಇಸ್ರಾಯೇಲ್ ಮತ್ತೆ ದೇಶವಾದ ಮೇಲೆಯೇ.

ಈ ಬಗೆಯ ಬದಲಾವಣೆಗಳನ್ನು ತರುವ ಸಂದರ್ಭಗಳು ಏರ್ಪಡುವುದು ದೇವರ ಕೈಯಲ್ಲೇ ಇದೆ. ಆದರೆ ಒಂದನ್ನು ಮಾತ್ರ ಖಚಿತವಾಗಿ ಹೇಳಬಹುದು. ಇಸ್ರಾಯೇಲಿಗೆ ಉಂಟಾಗಬಹುದಾದ ದಯನೀಯ ಪರಿಸ್ಥಿತಿ ಮಾತ್ರ ಅದು ಯೇಸುಕ್ರಿಸ್ತನ ಕಡೆ ತಿರುಗುವಂತೆ ಮಾಡುತ್ತದೆ. ಕ್ರಿಸ್ತನನ್ನು ಮೆಸ್ಸೀಯನೆಂದು ಇಸ್ರಾಯೇಲ್ ಒಪ್ಪಿಕೊಳ್ಳಲಿರುವ ಕಾಲದ ಬಗ್ಗೆ ಪ್ರವಾದಿಗಳು ಪ್ರವಾದಿಸಿದ್ದಾರೆ– ‘‘ತಾವು ಇರಿದವನನ್ನು ದಿಟ್ಟಿಸಿ ನೋಡುವರು; ಇದ್ದೊಬ್ಬ ಮನಗನ್ನು ಕಳೆದುಕೊಂಡಂತೆ ಅವನಿಗಾಗಿ ಗೋಳಾಡುವರು’’ (ಜೆಕರ್ಯ 12:10). ಆಗ ಇಸ್ರಾಯೇಲಿಗೆ ಮಾತ್ರವಲ್ಲ, ಇಡೀ ಪ್ರಪಂಚಕ್ಕೆ ಕಷ್ಟಕಾಲವಾಗಿರುವುದು. ಏಕಂದರೆ ಇಸ್ರಾಯೇಲಿನ ಅಂತಿಮ ಸ್ಥಾಪನೆಯು ದೇವರಿಂದ ಅನುಮೋದಿಸಲ್ಪಟ್ಟು, ಯೇಸುಕ್ರಿಸ್ತನ ಮೇಲ್ವಿಚಾರಣೆಗೆ ಒಳಪಟ್ಟ ಹೊಸ ಜಾಗತಿಕ ವ್ಯವಸ್ಥೆಯನ್ನು ಜನ ಸ್ವಾಗತಿಸಲಿದ್ದಾರೆ. ಇಸ್ರಾಯೇಲಿನ ಬಗ್ಗೆ ಇಂದಿನ ತನಕವೂ ಸತ್ಯವೇದದಲ್ಲಿ ಉಲ್ಲೇಖಿಸಲ್ಪಟ್ಟ ಪ್ರವಾದನೆಗಳೆಲ್ಲಾ ನೆರವೇರಿವೆ. ಇದರಿಂದ ಬರಲಿರುವ ಭವಿಷ್ಯ ಕಾಲದಲ್ಲಿ ನಡೆಯಲಿವೆ ಎನ್ನಲಾದ ಪ್ರವಾದನೆಗಳ ಸತ್ಯತೆಯ ಬಗ್ಗೆಯೂ ನಮಗೆ ವಿಶ್ವಾಸ ಮೂಡಿದೆ. ‘‘ಪ್ರವಾದನ ವಾಕ್ಯವು ನಮಗೆ ಮತ್ತೂ ದೃಢವಾಗಿದೆ ......... ಅದನ್ನು ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪವೆಂದೆಣಿಸಿ ಅದಕ್ಕೆ ಲಕ್ಷ್ಯ ಕೊಡುವುದೇ ಒಳ್ಳೆಯದು’’ (2ಪೇತ್ರ 1:19).

**–ರಾನ್ ಕಿಡ್**